ಸಂಪುಟ/Volume : 41
ಸಂಚಿಕೆ/Issue : 12
ಪುಟ/Pages : 12
ಬೆಲೆ/Price : ₹ 10/–

ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಸೆಪ್ಟೆಂಬರ್ 2019 ಮಾಸ ಪತ್ರಿಕೆ

Akhila Karnataka Shikshaka Samachar | September 2019 | Monthly




A Journal of Karnataka State Secondary Teachers' Association

## ಚಂದ್ರಯಾನ –2 (22 ಜುಲೈ 2019–7 ಸೆಪ್ಟೆಂಬರ್ 2019)

ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆಯ ಸಂಪೂರ್ಣ ದೇಶಿಯ ತಂತ್ರಜ್ಞಾನ ಅಳವಡಿಸಿ ನಿರ್ಮಿಸಿರುವ ಚಂದ್ರ ಪರಿಶೋಧನಾ ಅಭಿಯಾನವನ್ನು 22 ಜುಲೈ 2019 ರ ಅಪರಾಹ್ನ 02 ಗಂಟೆ 43 ನಿಮಿಷ ಭಾರತೀಯ ಕಾಲಮಾನಕ್ಕೆ ಆಂಧ್ರಪ್ರದೇಶದ ಶ್ರೀ ಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಜಿಯೋಸಿಂಕ್ರೋನಸ್ ಸ್ಯಾಟಲೈಟ್ ಲಾಂಚ್ ವೆಹಿಕಲ್ ಮಾರ್ಕ 3 (GSLV MK 3 - M1) ರಾಕೆಟ್ ಮೂಲಕ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು.

ಚಂದ್ರಯಾನ 2 ಲ್ಯಾಂಡರ್ ವಿಕ್ರಮ್ 07.09.2019 ಶನಿವಾರ ಬೆಳಗಿನ ಜಾವ 1.55 ಕ್ಕೆ ಚಂದ್ರನ ನೆಲ ಸ್ಪರ್ಶ ಮಾಡುವ ಸಮಯದ ಕೊನೆಯ ಹಂತದಲ್ಲಿ ಸಂಪರ್ಕ ಕಡಿದುಕೊಂಡಿತು. ಆದರೆ ಅದನ್ನು ಹೊತ್ತು ತಂದ ಆರ್ಬಿಟರ್ ಉತ್ತಮವಾಗಿ ಚಂದ್ರನನ್ನು ಪರಿಭ್ರಮಣ ಮಾಡುತ್ತಿದೆ.

ಚಂದ್ರಯಾನ – 2 ದ ಬಗ್ಗೆ ನಮ್ಮ ಎಲ್ಲಾ ಜಾಣ ಓದುಗರು ಈಗಾಗಲೇ ತಿಳಿದುಕೊಂಡಿರುತ್ತಾರೆ. ಆದರೆ ಚಂದ್ರಯಾನ 2 ದಿಂದ ಒಂದು ಸಂಘಟನೆ ಏನನ್ನಾದರೂ ಕಲಿಯಬಹುದೇ? ಎಂಬುದನ್ನು ಸೂಕ್ಷ್ಮವಾಗಿ ಚಿಂತಿಸೋಣ.

ಮೊದಲನೆಯದಾಗಿ ಅಭಿಯಾನಕ್ಕೆ ಭಾರತ ಸರ್ಕಾರವು 18 ಸೆಪ್ಟೆಂಬರ್ 2008 ರಲ್ಲಿ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿತು. ನಿರಂತರ ಕಾರ್ಯಾಚರಣೆಯಿಂದ ಮಾತ್ರವೇ ಭಾರತ 7 ಸೆಪ್ಟೆಂಬರ್ 2019 ರಂದು ಪೂರ್ಣಗೊಳಿಸಲು ಸಾಧ್ಯವಾಯಿತು.

ಯಾವುದೇ ಒಳ್ಳೆಯ ಕೆಲಸ ಕಾರ್ಯಗಳಿಗೆ ಪೂರ್ವತಯಾರಿ, ಯೋಜನೆ, ಹಿರಿಯರ ಅನುಮೋದನೆ ಬೇಕು ಎಂಬುದನ್ನು ನಾವು ಈ ಮೇಲಿನ ಅಂಶದಿಂದ ತಿಳಿದುಕೊಳ್ಳಬಹುದು.

ಚಂದ್ರಯಾನ 2 ಎಂಬ ಮಹತ್ವಾಕಾಂಕ್ಷೆಯ ಕಾರ್ಯ ಕೇವಲ ಒಬ್ಬ ವ್ಯಕ್ತಿಯಿಂದ ಆದುದಲ್ಲ. ಒಬ್ಬ ಉತ್ತಮ, ಅತ್ಯುತ್ಸಾಹಿ ನಾಯಕನನ್ನು ಹೊಂದಿದ ತಂಡದ ಕೆಲಸ. ಇದರಿಂದ ಕಲಿಯಬಹುದಾದ ಮುಖ್ಯ ಗುಣವೆಂದರೆ ಒಗ್ಗಟ್ಟಿನಲ್ಲಿ ಬಲವಿದೆಯೆಂದು. ಸಂಘಟನೆಯೆಂದರೆ ಇದೇ ಅಲ್ಲವೇ ? ಯಾವುದೇ ಉತ್ತಮ ಕಾರ್ಯ ಮಾಡುವಾಗಲೂ ಎಲ್ಲಾ ಕಾರ್ಯಕರ್ತರನ್ನೊಳಗೊಂಡು ಎಲ್ಲರೂ ಒಟ್ಟಾಗಿ ಮಾಡಿದರೊಳತಲ್ಲವೇ ?

ಚಂದ್ರಯಾನ 2 ಕಾರ್ಯಾಚರಣೆಯ ಕೊನೆಯ 15 ನಿಮಿಷಗಳು ಬಹಳ ಮುಖ್ಯ. ಚಂದ್ರನ ಸ್ಪರ್ಶ ಮಾಡುವಾಗ soft landing ಆಗಬೇಕೆಂಬುದು ಆ ತಂಡದವರೆಲ್ಲರ ಬಯಕೆಯಾಗಿತ್ತು. ಆದರೆ ಏನು ಮಾಡುವುದು ನಿಮಗೆಲ್ಲಾ ತಿಳಿದಂತೆ ಕೊನೆಯ ಕ್ಷಣ ಆ ತಂಡ ಅಂದುಕೊಂಡಂತೆ ಆಗಲಿಲ್ಲ. ಆದರೂ ಈ ತಂಡ ಧೃತಿಗೆಡಲಿಲ್ಲವೆಂಬುದು ಒಂದು ವಿಶೇಷವೇ ಸರಿ.

ಸಂಘಟನೆಯಲ್ಲೂ ಯಾವುದೇ ಕೆಲಸ ಕಾರ್ಯಗಳು ಅಂದುಕೊಂಡಂತೆ ಆಗಲಿಲ್ಲವೆಂದರೂ ಧೃತಿಗೆಡದೆ ಕೆಲಸದಲ್ಲಿ ತೊಡಗಬೇಕೆಂಬುದೇ ಇದರ ಸಂದೇಶವಲ್ಲವೇ ?

ಚಂದ್ರಯಾನ 2 ನ್ನು ವೀಕ್ಷಿಸಲು ಬಂದಿದ್ದ ದೇಶದ ನಾಯಕ ಕಾರ್ಯಾಚರಣೆ ಅಂದುಕೊಂಡಂತೆ ಆಗದೇ ಇದ್ದರೂ ಕಾರ್ಯನಿರತ ತಂಡದ ಪ್ರತಿಯೊಬ್ಬ ವಿಜ್ಞಾನಿಯನ್ನು ಪ್ರೋತ್ಸಾಹಿಸಿದ ರೀತಿ ಅನನ್ಯವಾದುದು. ಆ ತಂಡದ ನಾಯಕನನ್ನು ದೇಶದ ನಾಯಕ ಪ್ರೋತ್ಸಾಹಿಸಿ, ಸಂತೈಸಿ, ಹುರಿದುಂಬಿಸಿದ ರೀತಿ ಎಲ್ಲಾ ಸಂಘಟನೆಗಳ ನಾಯಕರಿಗೆ ಒಂದು ಪಾಠವೆಂದರೆ ತಪ್ಪಾಗಲಾರದು.

ನಮ್ಮ ನಾಡಿನ ಶ್ರೇಷ್ಠ ವಿಜ್ಞಾನಿಗಳ ತಂಡಕ್ಕೆ, ಸೋತಾಗ ಧೃತಿಗೆಡಬಾರದೆಂದು ಎಲ್ಲರ ಬೆನ್ನು ತಟ್ಟಿದ ಪ್ರಧಾನಿ ಮೋದಿಯವರಿಗೆ ಒಂದು ಸಲ್ಯೂಟ್ ಹೊಡೆಯೋಣ.

ದೇಶ ಇನ್ನೂ ಹತ್ತಾರು ಇಂತಹ ಸಾಧನೆಗೈದು ವಿಶ್ವದ ಉನ್ನತ ರಾಷ್ಟ್ರವಾಗಲಿ ಎಂದು ಹಾರೈಸೋಣ.

ಸಂಪಾದಕ

## ಸೂಕ್ತಿ



ಪ್ರಾರ್ಥನೆ ಎಂದರೆ ಬೇಡುವುದಲ್ಲ. ಆತ್ಮವನ್ನು ಸಂತೈಸುವುದು. ಪ್ರತಿದಿನವೂ ನಮ್ಮ ದೌರ್ಬಲ್ಯಗಳನ್ನು ಒಪ್ಪಿಕೊಳ್ಳುವುದು. ಪ್ರಾರ್ಥನೆಯಲ್ಲಿ ಹೃದಯರಹಿತ ಶಬ್ದಗಳ ಬದಲಾಗಿ, ಶಬ್ದ ರಹಿತ ಹೃದಯವಿರಲಿ.

- ಮಹಾತ್ಮಾ ಗಾಂಧೀಜಿ

## ಪರಿವಿಡಿ


- ಶಿಕ್ಷಕರ ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿಯ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಮನವಿ 3
- ಗಾಂಧೀಜಿ ಜೀವನದ ಘಟನೆಗಳು 5
- ಎಲ್ಲರನ್ನೂ ಸಲಹುವ ಹಿಂದು ಧರ್ಮದವನು ನಾನು 6
- ಮೈಸೂರು ದಸರಾ ಎಷ್ಟೊಂದು ಸುಂದರಾ 8
- ಸರ್ಕಾರ ಪತ್ರಗಳ ಬದಲಾವಣೆ ಮಾಡಲಿ: ರಘುನಂದನ 11
- ಚಿತ್ರಸುದ್ದಿ 12

# ಶಿಕ್ಷಕರ ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿಯ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಮನವಿ

**ದಿನಾಂಕ 22.9.2019 ರ ಸೋಮವಾರದಂದು ಮಾನ್ಯ ಶಿಕ್ಷಣ ಸಚಿವರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಭಾಗವಹಿಸಿ ಶಿಕ್ಷಕರ ವಿವಿಧ ಬಗೆಯ ಸಮಸ್ಯೆಗಳನ್ನು ಶಾಂತವಾಗಿ ಆಲಿಸಿ ಶಿಕ್ಷಕ ಸಂಘದ ಪದಾಧಿಕಾರಿಗಳು ನೀಡಿದ ಮನವಿ ಪತ್ರವನ್ನು ಸ್ವೀಕರಿಸಿದರು. ನಂತರ ಮಾತನಾಡುತ್ತಾ ನಿಮ್ಮ ಮನವಿ ಪತ್ರದಲ್ಲಿರುವ ಸಮಸ್ಯೆಗಳನ್ನು ಅಧ್ಯಯನ ಮಾಡಿ ಸೂಕ್ತ ಪರಿಹಾರವನ್ನು ಕೊಡುತ್ತೇನೆ ಎಂಬ ಆಶ್ವಾಸನೆ ನೀಡಿದರು.**

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ(ರಿ)ವು ಕಳೆದ ಐವತ್ತು ವರ್ಷಗಳಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಕಾರ್ಯಮಾಡುತ್ತಾ, ಶಿಕ್ಷಕರ ಮತ್ತು ಶಿಕ್ಷಣದ ಪ್ರಗತಿಗಾಗಿ ಶ್ರಮಿಸುತ್ತಾ ಬಂದಿದೆ. ಆದುದರಿಂದ ಸಂಘವು ಈ ಕೆಳಗೆ ಪಟ್ಟಿ ಮಾಡಿದ ಶಿಕ್ಷಕರ ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ಈ ಮೂಲಕ ಒತ್ತಾಯಿಸುತ್ತದೆ.

1. ಈ ಹಿಂದಿನಂತೆ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಿಗೆ ಇರುವಂತಹ 15 ದಿನಗಳ ಸಾಂದರ್ಭಿಕ ರಜೆಯನ್ನು ಯಥಾಸ್ಥಿತಿಯಲ್ಲಿ ಮುಂದುವರಿಯುವಂತೆ ಪ್ರತ್ಯೇಕ ಆದೇಶ ಹೊರಡಿಸುವುದು.
2. ವರ್ಗಾವಣಾ ನೀತಿಯಲ್ಲಿನ ತೊಡಕುಗಳನ್ನು ವೈಜ್ಞಾನಿಕ ರೀತಿಯಲ್ಲಿ ಸರಿಪಡಿಸಿ ಶಿಕ್ಷಕ ಸ್ನೇಹಿ ವರ್ಗಾವಣಾ ನೀತಿಯನ್ನು ಜಾರಿಗೆ ತರುವುದು.
3. 2011ರಿಂದ ಪ್ರೌಢಶಾಲೆಯಿಂದ ಪದವಿಪೂರ್ವ ಕಾಲೇಜಿಗೆ ಬಡ್ತಿ ನೀಡುತ್ತಿರುವುದಿಲ್ಲ. ಬಡ್ತಿ ಪ್ರಕ್ರಿಯೆಯನ್ನು ಪ್ರಾರಂಭಿಸುವುದು.
4. ವೃತ್ತಿ ಶಿಕ್ಷಣ ಇಲಾಖೆಯಿಂದ (ಜೆ.ಓಸಿ)ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಂಡ ಕೇವಲ 105 ಉಪನ್ಯಾಸಕರಿಗೆ ಬಿ.ಎಡ್ ಶಿಕ್ಷಣದ ವಿನಾಯಿತಿ ನೀಡಿ ಖಾಯಂಪೂರ್ವ ಸೇವಾವಧಿ (ಪ್ರೊಬೇಷನರಿ) ಘೋಷಿಸುವುದು.
5. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಜ್ಯೋತಿ ಸಂಜೀವಿನಿ ಯೋಜನೆಯನ್ನು ಅಳವಡಿಸುವುದು.
6. ಅನುದಾನಿತ ಶಾಲಾ ಶಿಕ್ಷಕರಿಗೆ ಕಾಲ್ಪನಿಕ ವೇತನ ನೀಡುವುದು
7. ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡುವುದು.
8. ವೃತ್ತಿ ಶಿಕ್ಷಣ ಇಲಾಖೆಯಲ್ಲಿ 20–25 ವರ್ಷಗಳಿಂದ ಸೇವೆ ಸಲ್ಲಿಸಿ, ಬಹುತೇಕ ಸಿಬ್ಬಂದಿ ನಿವೃತ್ತಿ ಅಂಚಿನಲ್ಲಿರುವುದರಿಂದ ಅವರಿಗೆ ಯಾವುದೇ ನಿವೃತ್ತಿ ವೇತನ ನೀಡುತ್ತಿಲ್ಲ. ಆದ್ದರಿಂದ ಹಿಂದಿನ ಖಾಯಂಪೂರ್ವ ಸೇವೆಯನ್ನು ಪರಿಗಣಿಸಿ ಹಳೆಯ ನಿಶ್ಚಿತ ಪಿಂಚಣಿ ನೀಡುವುದು.
9. ಅನುದಾನಿತ ಶಾಲೆಗಳಲ್ಲಿ ಇಲ್ಲಿಯ ವರೆಗೆ ಖಾಲಿಯಾಗುವ ಹುದ್ದೆಗಳನ್ನು ತುಂಬುವದು.
10. 1995 ರ ನಂತರ ಪ್ರಾರಂಭವಾದ ಅನುದಾನರಹಿತ ಶಾಲೆಗಳಿಗೆ ಅನುದಾನ ನೀಡುವುದು ಮತ್ತು ನಿವೃತ್ತ ಶಿಕ್ಷಕರಿಗೆ ನಿವೃತ್ತಿ ವೇತನವನ್ನು ಆದಷ್ಟು ಬೇಗ ನೀಡುವುದು.
11. ದೈಹಿಕ ಶಿಕ್ಷಕರಿಗೆ ವೃಂದ ಮತ್ತು ನೇಮಕಾತಿಯಲ್ಲಿ ತಿದ್ದುಪಡಿ ತರುವುದು.
12. ವೃತ್ತಿ ಶಿಕ್ಷಣ ಇಲಾಖೆಯಿಂದ ಪ್ರೌಢಶಿಕ್ಷಣದಲ್ಲಿ ವಿಲೀನಗೊಂಡ ವೃತ್ತಿ ಶಿಕ್ಷಕರಿಗೆ ಆಗುತ್ತಿರುವ ವೇತನ ತಾರತಮ್ಯವನ್ನು ಸರಿಪಡಿಸುವುದು.
13. ಪದವಿ ಪೂರ್ವ ಶಿಕ್ಷಣದಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರ ವೇತನ ತಾರತಮ್ಯವನ್ನು ಸರಿಪಡಿಸುವುದು.
14. 1996 ರಿಂದ ಮತ್ತು ಹಿಂದಿನಿಂದ ಸೇವೆ ಸಲ್ಲಿಸುತ್ತಾ ಅರೆಕಾಲಿಕ, ಗುತ್ತಿಗೆ, ಇತರೆ ಕಾಯಂಗೊಂಡ ಮತ್ತು 2006ರ ನಂತರ ಸೇವೆಗೆ ಸೇರಿದ ಸರ್ಕಾರಿ ಮತ್ತು ಖಾಸಗಿ ಶಿಕ್ಷಕರಿಗೆ ಹಳೆಯ ನಿಶ್ಚಿತ ಪಿಂಚಣಿ ನೀಡುವುದು.
15. ಎಲ್ಲಾ ಶಾಲೆಗಳಲ್ಲಿ ಸಂಗೀತ, ಚಿತ್ರಕಲೆ, ವೃತ್ತಿ ಶಿಕ್ಷಕರ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತುಂಬುವುದು.
16. ವಿಕಲಚೇತನ ಮಕ್ಕಳಿಗಾಗಿ ಸರ್ಕಾರದ ವಿಶೇಷ ಬಿ.ಎಡ್ ಆದ ಶಿಕ್ಷಕರನ್ನೇ ತೆಗೆದುಕೊಳ್ಳಬೇಕು. ಆದರೆ ಈ ಶಿಕ್ಷಕರನ್ನು ಹೊರತುಪಡಿಸಿ ಹೊರಗಿನ ಶಿಕ್ಷಕರನ್ನು ಪರಿಗಣಿಸಬಾರದು.
17. ಭಾಷಾ ಅಲ್ಪಸಂಖ್ಯಾತ ಶಾಲೆಗಳಲ್ಲಿ ರೋಸ್ಟರ್ ಪದ್ಧತಿಯನ್ನು ಕೈ ಬಿಡುವುದು.
18. ಧಾರವಾಡ ವಿಭಾಗದಲ್ಲಿ ಮುಖ್ಯ ಶಿಕ್ಷಕರ ಬಡ್ತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಬೆಂಗಳೂರು ವಿಭಾಗದಲ್ಲಿ

**ಪುಟ 9 ಕ್ಕೆ ➢**

➢ ಪುಟ 3 ರಿಂದ..... ಮನವಿ...

ಚಾಲನೆಯಾಗಿರುವುದಿಲ್ಲ, ಬಡ್ತಿ ಪ್ರಕ್ರಿಯೆಯುನ್ನು ಪ್ರಾರಂಭಗೊಳಿಸುವುದು.

19. ಶಿಕ್ಷಕರ ನೇಮಕಾತಿಯಲ್ಲಿ ಈಗಾಗಲೇ ಪಿಸಿಎಮ್‌ಸಿ ವಿಷಯಗಳಲ್ಲಿ ಪದವಿ ಪಡೆದು ಟೆಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರೂ, ಇತ್ತೀಚಿನ ಸಿ ಅಂಡ್ ಆರ್ ಪ್ರಕಾರ ಪಿಸಿಎಮ್‌ಬಿ ವಿಷಯಗಳಲ್ಲಿ ಪದವಿ ಪಡೆದಿರಬೇಕೆಂಬ ನಿಯಮವಿರುವುದರಿಂದ ನೇಮಕಾತಿಯಲ್ಲಿ ಅವಕಾಶ ವಂಚಿತರಾಗಿರುವುದರಿಂದ ಅವಕಾಶ ನೀಡುವುದು.

20. ಆರ್.ಆರ್.ಎ ಭತ್ಯೆಯನ್ನು ಗ್ರಾಮೀಣ ಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ನೀಡುವುದರಿಂದ ಶಿಕ್ಷಕರು ಗ್ರಾಮೀಣ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸಲು ಪ್ರೋತ್ಸಾಹ ನೀಡಿದಂತಾಗುತ್ತದೆ.

21. ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತವನ್ನು 01:30 ಮಾಡುವುದು.

22. ಜಿ.ಪಿ.ಎಫ್‌ನಂತೆ ಕೆ.ಜಿ.ಐ.ಡಿಯುನ್ನು ಗಣಕೀಕೃತ ಗೊಳಿಸುವುದು.

23. ಹಿಂದಿ ಬೋಧನೆಗೆ ಪ್ರೌಢಶಾಲೆಯಲ್ಲಿ 4 ಅವಧಿಯಿದ್ದು, ಅದನ್ನು 5 ಅವಧಿಗೆ ಹೆಚ್ಚಿಸುವುದು.

24. ಹಿಂದಿ ವಿಷಯಕ್ಕೆ ವಿಷಯ ಪರೀವೀಕ್ಷಕರನ್ನು ನೇಮಕ ಮಾಡುವುದು.

25. ಸರ್ಕಾರಿ ಶಾಲೆಯ ಮಕ್ಕಳಿಗಳಿಗೆ ವಿವಿಧ ಯೋಜನೆಗಳ ಮೂಲಕ ಸರ್ಕಾರಿ ಶಾಲೆಗಳಲ್ಲಿ ಉಳಿಯುವಂತೆ ಪ್ರೋತ್ಸಾಹಿಸುವುದು.

26. ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲಾ ಶಿಕ್ಷಕರಿಗೆ ವಿಶೇಷ ಭತ್ಯೆಯಲ್ಲಿನ ಎಚ್.ಆರ್.ಎ ಮತ್ತು ಡಿ.ಎ ತಡೆಹಿಡಿದಿದ್ದಾರೆ. ಅದಕ್ಕೆ ಪ್ರತ್ಯೇಕ ಆದೇಶ ಹೊರಡಿಸಿ, ಮುಂದುವರೆಸುವುದು.

27. ಸಂಸ್ಕೃತ ಭಾಷೆಯ ಎಲ್ಲಾ ಖಾಲಿ ಹುದ್ದೆಗಳನ್ನು ವರ್ಗಾವಣೆ ಪ್ರಕ್ರಿಯೆಯಲ್ಲಿ ತೋರಿಸುತ್ತಿಲ್ಲ ಅದನ್ನು ಸರಿಪಡಿಸುವುದು ಹಾಗೂ ಡಿ.ಎಸ್.ಇ.ಆರ್.ಟಿ ವತಿಯಿಂದ ಸಂಸ್ಕೃತ ಶಿಕ್ಷಕರಿಗೆ ತರಬೇತಿ ನೀಡುವುದು.

28. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿ ಕನಿಷ್ಠ 25 ಸಂಖ್ಯೆ ಆಗದಿದ್ದಲ್ಲಿ ಶಿಕ್ಷಕರನ್ನು ಹೆಚ್ಚುವರಿಯೆಂದು ಪರಿಗಣಿಸಲಾಗುತ್ತಿದೆ. ಆದ್ದರಿಂದ ಕನಿಷ್ಠ ಸಂಖ್ಯೆಯ ಮಿತಿಯನ್ನು ಕಡಿಮೆಗೊಳಿಸುವುದು.

29. ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಬಡ್ತಿ ಹೊಂದಿದ ಶಿಕ್ಷಕರಿಗೆ ಕಾಲಮಿತಿ ಬಡ್ತಿ ವೇತನ ನೀಡದೇ, ಕಿರಿಯ ಶಿಕ್ಷಕರಿಗಿಂತ ಕಡಿಮೆ ವೇತನ ಪಡೆಯುತ್ತಿರುವುದನ್ನು ಸರಿ ಪಡಿಸುವುದು.

30. ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ನೇಮಕಗೊಂಡು ಕೇವಲ 5 ವರ್ಷ ಸೇವೆ ಸಲ್ಲಿಸಿ ಪ್ರಾಂಶುಪಾಲರ ಹುದ್ದೆಗೆ ನೇರ ನೇಮಕಾತಿ ಮಾಡುವಂತೆ ಸಿ ಅಂಡ್ ಆರ್ ಮಾಡಿರುವುದರಿಂದ ಎಲ್ಲಾ ಹಿರಿಯ ಉಪನ್ಯಾಸಕರು ಬಡ್ತಿ ಅವಕಾಶ ವಂಚಿತರಾಗುತ್ತಾರೆ. ಆದ್ದರಿಂದ ಹಿಂದಿನ ಮಾದರಿಯಲ್ಲಿಯೇ ಬಡ್ತಿ ನೀಡುವುದು.

31. ಕಲ್ಯಾಣ ಕರ್ನಾಟಕ (ಹೆಚ್.ಕೆ.) ಮತ್ತು ಕಲ್ಯಾಣ ಕರ್ನಾಟಕೇತರ ಶಿಕ್ಷಕರ ಮಧ್ಯದಲ್ಲಿಯ ಭಡ್ತಿಯಲ್ಲಿ ಆಗಿರುವ ಅನ್ಯಾಯ ಸರಿಪಡಿಸುವುದು.

32. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡುವಾಗ ಆಗುವ ಅಕ್ರಮಗಳನ್ನು ತಡೆಗಟ್ಟುವುದು.

33. ಶೈಕ್ಷಣಿಕ ಅವಧಿಯ ಮಧ್ಯಭಾಗದಲ್ಲಿ ಶಿಕ್ಷಕರ ವರ್ಗಾವಣೆ ಮಾಡದೇ, ಬೇಸಿಗೆ ರಜಾ ಅವಧಿಯಲ್ಲಿ ವರ್ಗಾವಣಾ ಪ್ರಕ್ರಿಯೆ ಮಾಡಿ ವಿದ್ಯಾರ್ಥಿಗೆ ಮತ್ತು ಶಿಕ್ಷಕರಿಗೆ ಅನುಕೂಲ ಮಾಡುವುದು.

•

# ಉತ್ತರ ಜಿಲ್ಲೆಯ ಪದಾಧಿಕಾರಿಗಳ ಸಭೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳ ಸಭೆಯ ದಿನಾಂಕ 24–9–2019 ರಂದು ಶ್ರೀ ಜಿ.ಎಸ್ ಕೃಷ್ಣಮೂರ್ತಿ–ಕಾರ್ಯಾಲಯ ಪ್ರಮುಖ್ ಮತ್ತು ಶ್ರೀ ಜೆ.ಎಂ ಜೋಶಿ ರಾಜ್ಯ ಕೋಶಾಧ್ಯಕ್ಷರು, ಇವರ ಸಮ್ಮುಖದಲ್ಲಿ ಜರುಗಿತು. 2019–22 ಮೂರು ವರ್ಷಗಳ ಅವಧಿಗೆ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಘೋಷಿಸಲಾಯಿತು.

ಅಧ್ಯಕ್ಷರು: ಶ್ರೀ ಎಸ್.ಜಿ ತಾಂಬೆ, ಪ್ರಧಾನ ಕಾರ್ಯದರ್ಶಿ– ಶ್ರೀ ಗಂಗಪ್ಪ, ಉಪಾಧ್ಯಕ್ಷರು– ಶ್ರೀ ಎ.ಸಿ ಪ್ರದೀಪ್, ಶ್ರೀ.ಕೆ ಸುಬ್ಬರಾಜು, ಶ್ರೀ ಬಿ.ಆರ್ ಸಿದ್ಧೇಗೌಡ, ಶ್ರೀ. ನಾರಾಯಣ, ಸಹ ಕಾರ್ಯದರ್ಶಿ– ಶ್ರೀ ಸಿ ಶಿವಕುಮಾರ್, , ಕೋಶಾಧ್ಯಕ್ಷರು– ಶ್ರೀ. ಬಿ.ಆರ್ ಹರಿದಾಸ, ಸಂಘಟನಾ ಕಾರ್ಯದರ್ಶಿಗಳು–ಶ್ರೀ.ಸಿ ಶಿವಕುಮಾರ್, ಕೋಶಾಧ್ಯಕ್ಷರು– ಶ್ರೀ ಬಿ ಆರ್ ಹರಿದಾಸ್, ಸಂಘಟನಾ ಕಾರ್ಯದರ್ಶಿಗಳು– ಶ್ರೀ ಎಂ ಎಸ್ ಜನಾರ್ಧನ್, ಶ್ರೀ ಜಿ ಆರ್ ವಿಶ್ವನಾಥ, ಮಹಿಳಾ ಸಂಘಟನಾ ಕಾರ್ಯದರ್ಶಿ– ಶ್ರೀಮತಿ ಎಸ್.ಪಿ ದಾಕ್ಷಾಯಿಣಿ, ಶ್ರೀ ಸೀತಾ ಟಿ ಭಟ್, ಕಾರ್ಯಕಾರಿ ಸಮಿತಿ ಸದಸ್ಯರು– ಶ್ರೀ ನಾರಾಯಣ ಭಟ್, ಶ್ರೀ ಮಲ್ಲಿಕಾರ್ಜುನ ಜಿ ಕೊಡಗಿ, ಶ್ರೀ ಎಂ ವಿ. ಗಂಗಾಧರ, ಶ್ರೀ ಶಿವಕುಮಾರಸ್ವಾಮಿ, ಶ್ರೀ ಟಿ.ಆರ್ ಮಂಜುನಾಥ, ಶ್ರೀ ಜಿ ಎಂ ರಾಜೇಶ್, ಶ್ರೀ ಎಲ್ ಜಿ ನಾರಾಯಣ.

•

# ಗಾಂಧೀಜಿ ಜೀವನದ ಘಟನೆಗಳು




ಇದೇ ಅಕ್ಟೋಬರ್ 2ನೇ ತಾರೀಖಿಗೆ ಮೋಹನ್‌ದಾಸ್ ಕರಮಚಂದ್‌ಗಾಂಧಿ ಹುಟ್ಟಿ 150 ವರ್ಷಗಳಾಗುತ್ತದೆ. ಹುಟ್ಟಿದ್ದು ಗುಜರಾತ್ ರಾಜ್ಯದ ಪೋರಬಂದರ್ ಎಂಬ ಸಂಸ್ಥಾನದಲ್ಲಿ. ತಂದೆ ಕರಮಚಂದ್‌ಗಾಂಧಿ, ತಾಯಿ ಪುತಲೀಬಾಯಿ. ಅಂದಿನಕಾಲದ ಪದ್ಧತಿಯಂತೆ, ತನ್ನ 13ನೇ ವಯಸ್ಸಿಗೆ ವಿವಾಹವಾಗಿದ್ದು ಕಸ್ತೂರಿ ಬಾ ಅವರನ್ನು. ತಾಯಿಯಿಂದ ಸತ್ಯನಿಷ್ಠೆ, ಧರ್ಮನಿಷ್ಠೆ ಕಲಿತ ಗಾಂಧೀಜಿ ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಪದವಿಗಳಿಸುವವರೆಗೆ ಅತಿಸಾಧಾರಣವ್ಯಕ್ತಿ. ಅವರ ವ್ಯಕ್ತಿತ್ವ, ಪ್ರತಿಭೆ ಅರಳಿದ್ದು ದಕ್ಷಿಣ ಆಫ್ರಿಕಾಕ್ಕೆ ವೃತ್ತಿ ಜೀವನ ಅರಸಿಹೋದಾಗ. 1915ರಲ್ಲಿ ದಕ್ಷಿಣ ಆಫ್ರಿಕಾ ಇಂದ ಬರುವ ವೇಳೆಗೆ ಬುದ್ಧಿ ಮನಸ್ಸುಗಳಿಂದ ಪಕ್ವವಾದ ಗಾಂಧಿ ತಮ್ಮ ರಾಜಕೀಯ ಗುರುಗಳಾದ ಗೋಪಾಲಕೃಷ್ಣ ಗೋಖಲೆಯವರ ಆದೇಶದಂತೆ ಇಡೀ ಭಾರತವನ್ನು ಸುತ್ತಿದರು. ಗ್ರಾಮೀಣ ಭಾರತದ ಜನಜೀವನವನ್ನು ಪರಿಚಯ ಮಾಡಿಕೊಂಡರು. ತಮಿಳಿನ ಸಂತಕವಿ ತಿರುಮಳ್ಳುವರ್ ವಿರಚಿತ 'ತಿರುಕ್ಕುರಳ್' ಓದಿ ಪ್ರಭಾವಿತರಾಗಿ 'ಸತ್ಯಾಗ್ರಹ' ಅರ್ಥ ತಿಳಿದು ಅದನ್ನು ಜೀವನವ್ರತವಾಗಿ ಸ್ವೀಕರಿಸಿದರು.

ಗಾಂಧೀಜಿಯವರ ತುಂಡು ಮುಂಡಿನ ವೇಷ, ಸರಳ ಜೀವನ, ಹಿಂದೂ ಜೀವನ ನಿಷ್ಠೆ, ಸಂಜೆಯ ಪ್ರಾರ್ಥನೆ, ರಾಮನಾಮದ ಸಂಕೀರ್ತನೆ, ರಾಮರಾಜ್ಯದ ಕಲ್ಪನೆ ಅವರನ್ನು ಸಂತನಾಗಿ ಕಾಣುವಂತೆ ಮಾಡಿತು. ಲಕ್ಷಾಂತರ ಜನ ಅವರ ಹಿಂಬಾಲಕರಾದರು. ತನ್ನ ಆಚರಣೆಯಿಂದಲೇ ಓರ್ವ ವ್ಯಕ್ತಿ ತನ್ನ ಜೀವಮಾನ ಕಾಲದಲ್ಲೇ ಶ್ರೇಷ್ಠ ವ್ಯಕ್ತಿಯಾಗಬಹುದೆಂಬುದನ್ನು ತೋರಿಸಿಕೊಟ್ಟರು. ಈ ಕಾರಣಕ್ಕಾಗಿಯೇ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಕರೆ ನೀಡಿದಾಗಲೆಲ್ಲಾ ಸಾಮಾನ್ಯರಲ್ಲಿ ಸಾಮಾನ್ಯರೂ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ ದೇಶಕ್ಕಾಗಿ ಎಲ್ಲ ಕಷ್ಟಗಳನ್ನೂ ಸಹಿಸಿಕೊಂಡರು.

ಗಾಂಧೀಜಿಯವರ ಶಿಕ್ಷಣ ಪದ್ಧತಿ ಗ್ರಾಮಸ್ವರಾಜ್ಯದ ಕಲ್ಪನೆ, ಪಾನಪ್ರತಿಬಂಧ, ಸ್ವದೇಶೀವ್ರತ ಮುಂತಾದ ಅನೇಕ ವಿಚಾರಗಳು ಇಂದಿನ ಕಾಲಕ್ಕೂ ಪ್ರಸ್ತುತವಿದೆ.

ಗಾಂಧೀಜಿಯವರ ಜೀವನ ಅಸಂಖ್ಯೆ ಘಟನೆಗಳ ಸಂಗ್ರಹಕೋಶ ಆ ಘಟನೆಗಳ ಮೂಲಕ ನಾವು ಅವರ ಜೀವನಾದರ್ಶಗಳನ್ನು ಅರಿಯಬಹುದು. ಅರಿತರೆ ಸಾಲದು, ನಮ್ಮ ಜೀವನದಲ್ಲೂ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಆಗ ಮಾತ್ರ ನಾವು ಗಾಂಧೀಜಯಂತಿ ಆಚರಿಸಿದ್ದು ಸಾರ್ಥಕವಾದೀತು.

## ಘಟನೆ 1– ಯಾವುದೂ ಚಿಕ್ಕದ್ದಲ್ಲ

1915ರಲ್ಲಿ ಮುಂಬಯಿಯಲ್ಲಿ ಕಾಂಗ್ರೆಸ್ ಅಧಿವೇಶನ. ಆಗ ಗಾಂಧೀಜಿಯವರ ಜತೆಗಿದ್ದ ಆಚಾರ್ಯಕಾಲೇಕರ್‌ರವರು, ಸಣ್ಣ ಸಣ್ಣ ಸಂಗತಿಗಳ ಬಗ್ಗೆಯೂ ಗಾಂಧೀಜಿಯವರು ಎಷ್ಟು ಕಾಳಜಿಯನ್ನು ವಹಿಸುತ್ತಿದ್ದರು ಎಂಬುದನ್ನು ಈ ಘಟನೆಯ ಮೂಲಕ ನಿರೂಪಿಸುತ್ತಾರೆ.

ಅದೊಂದು ದಿನ ನಾನು, ಆಕ್ರೋಶಗೊಂಡ ಗಾಂಧೀಜಿ ತಮ್ಮ ಕೋಣೆಯಲ್ಲಿ ಏನನ್ನೋ ಹುಡುಕುತ್ತಿರುವುದನ್ನು ಕಂಡೆ. ಅವರ ಮನಸ್ಸು ಪ್ರಕ್ಷುಬ್ಧಗೊಂಡಿತ್ತು. ನಾನು ಸಹಜವಾಗಿ 'ಬಾಪು ಅದೇನನ್ನು ಹುಡುಕುತ್ತಿರುವಿರಿ? ಎಂದು ಕೇಳಿದೆ. " ಒಂದು ಪುಟಾಣಿ ಪೆನ್ಸಿಲ್" ಎಂದು ಉತ್ತರಿಸಿದರು. ತಕ್ಷಣ ನಾನು ನನ್ನ ಕೈಪೆಟ್ಟಿಗೆಯಿಂದ ಒಂದು ಉದ್ದನೆಯ ಪೆನ್ಸಿಲ್ ಅನ್ನು ತೆಗೆದುಕೊಟ್ಟೆ. ಬಾಪೂಜಿ "ಬೇಡ ಬೇಡ. ನನಗೆ ನಾನು ಹುಡುಕುತ್ತಿರುವ ಆ ಪುಟಾಣಿ ಪೆನ್ಸಿಲ್ಲೇ ಬೇಕು" ಎಂದರು "ಬಾಪೂಜೀ ಸದ್ಯಕ್ಕೆ ಈ ಪೆನ್ಸಿಲ್‌ಅನ್ನು ಉಪಯೋಗಿಸಿ, ಆ ನಂತರ ನಾನು ಹುಡುಕಿ ನಿಮ್ಮ ಪುಟಾಣಿ ಪೆನ್ಸಿಲ್ ಹುಡುಕಿಕೊಡುತ್ತೇನೆ" ಎಂದೆ.

"ನಿನಗಿದು ಅರ್ಥವಾಗುವುದಿಲ್ಲ ಕಾಕ" ಎಂದರು ಬಾಪೂಜಿ. ಮುಂದುವರೆದು "ಆ ತುಂಡು ಪೆನ್ಸಿಲ್ ಅನ್ನು ನಾನು ಕಳೆದು ಕೊಳ್ಳಬಾರದು. ಅದನ್ನು ನನಗೆ ಕೊಟ್ಟಿರುವುದು ಮದ್ರಾಸಿನಲ್ಲಿನ ಜಿ.ಯ ನಟೇಶನ್ ಅವರ ಕಿರಿಯ ಮಗ. ಎಷ್ಟು ಪ್ರೀತಿಯಿಂದ ಆ ಮಗು ಓಡಿ ಬಂದು ನನಗದನ್ನು ಕೊಟ್ಟಿದ್ದ; ಅದನ್ನು ನಾನು ಕಳೆದುಕೊಳ್ಳುವುದಾದರೂ ಹೇಗೆ? ಎಂದರು ಬಾಪೂಜಿ.

ನಾವಿಬ್ಬರೂ ಕೂಡಿ ಅದನ್ನು ಹುಡುಕಲು ಪ್ರಾರಂಭಿಸಿದೆವು. ಆ ಪುಟಾಣಿ ಪೆನ್ಸಿಲ್ ಸಿಕ್ಕ ನಂತರವೇ ಬಾಪೂಜಿಗೆ ಸಮಾಧಾನವಾದದ್ದು. ಆ ಪೆನ್ಸಿಲ್ ತುಂಡು ಇದ್ದದ್ದಾದರೂ ಎಷ್ಟು ಉದ್ದ? ಕೇವಲ ಒಂದು ಇಂಚು!

ಯಾವ ಸಂಗತಿಯೂ ಚಿಕ್ಕದಲ್ಲ. ಅದರ ಹಿಂದಿನ ಭಾವನೆಗಳು ಹಿರಿದು.

## ಘಟನೆ 2 – ಪುಟಾಣಿ ಬಾಲಿಕೆಯ ತ್ಯಾಗ

ಕರ್ನಾಟಕ ಪ್ರವಾಸದ ಅಂತ್ಯದಲ್ಲಿ ಗಾಂಧೀಜಿಗೆ ದಕ್ಷಿಣ ಕನ್ನಡದ ಉಡುಪಿಗೆ ಬಂದರು. ಬೇರೆ ಬೇರೆ ಬಿನ್ನವತ್ತಳೆಗೊಂದಿಗೆ ಉಡುಪಿಯ ಹಿಂದಿ ಪ್ರಚಾರ ಸಭೆಯವತಿಯಿಂದಲೂ ಒಂದು

ಪುಟ 9 ಕ್ಕೆ ➤



# ಎಲ್ಲರನ್ನೂ ಸಲಹುವ ಹಿಂದು ಧರ್ಮದವನು ನಾನು

ಭಾರತಾಂಬೆಗೆ, ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಗೆ ಜಯ ತಂದುಕೊಟ್ಟ ವೀರಸನ್ಯಾಸಿ ಸ್ವಾಮಿ ವಿವೇಕಾನಂದರನ್ನು ಸ್ಮರಿಸುವ ಶ್ರೇಷ್ಠ ದಿನ.

ಸ್ವಾಮಿ ವಿವೇಕಾನಂದರು 1893 ರ ಸೆಪ್ಟೆಂಬರ್ 11 ರಂದು ಅಮೇರಿಕಾದ ಚಿಕಾಗೋದಲ್ಲಿ ಚಾರಿತ್ರಿಕ ಭಾಷಣ ಮಾಡಿ ಇಂದಿಗೆ 125 ವರ್ಷಗಳಾದವು, 3 ನಿಮಿಷದ ಈ ಭಾಷಣ ಇಂದಿಗೂ ಕೋಟಿಕೋಟಿ ಭಾರತೀಯರ ಆತ್ಮಜಾಗೃತಿ ಮಾಡುತ್ತಿರುವುದನ್ನು ನೋಡಿದರೆ ಆ ಭಾಷಣದ ಮಹಿಮೆ, ಭಾಷಣ ಮಾಡಿದ ಮಹಾಮಹಿಮಾನ್ವಿತನ ಮಹಿಮೆ ಎಂಥದ್ದು ಇರಬೇಕು ಎಂಬ ಬಗೆಗೆ ನಮಗೆಲ್ಲಾ ಆಶ್ಚರ್ಯ ಆಗುತ್ತದೆ,

ಸ್ವಾಮಿ ವಿವೇಕಾನಂದರ ಬಳಿ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಬೇಕಾದ ಅರ್ಹತಾ ಪತ್ರ ಇಲ್ಲದಿರುವುದನ್ನು ತಿಳಿದ ಜಗತ್ಪ್ರಸಿದ್ಧ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಗ್ರೀಕ್ ಸಾಹಿತ್ಯದ ಪ್ರಾಧ್ಯಾಪಕರಾಗಿದ್ದ ಡಾ ಜಾನ್ ಹೆನ್ರಿ ರೈಟ್ ಅವರು ಸ್ವಾಮಿ ವಿವೇಕಾನಂದರ ಜೊತೆ ಸಂಭಾಷಣೆ ಮಾಡಿ ಈ ಕೆಳಗಿನ ಮಾತನ್ನು ಹೇಳುತ್ತಾರೆ, 'ಸ್ವಾಮೀಜಿ, ನಿಮ್ಮನ್ನು ಅರ್ಹತಾ ಪತ್ರ ತೋರಿಸುವಂತೆ ಕೇಳುವುದೆಂದರೆ, ಸೂರ್ಯನನ್ನು ಬೆಳಗಲು ನಿನಗೆ ಅಧಿಕಾರ' ಎಂದು ಕೇಳಿದಂತೆ. ಗುಲಾಮತನದಿಂದ ಹೊರಬರಲು ಪ್ರೇರಣೆ ನೀಡಿದ ಭಾಷಣವನ್ನು, ಮನುಷ್ಯ ಜನ್ಮ ಆತ್ಮವಿಶ್ವಾಸ ಪಡೆದು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬೇಕು ಎಂದು ಆತ್ಮದ ಅರಿವು ಮೂಡಿಸಿದ ಭಾಷಣವನ್ನು ಪ್ರತಿ ಒಬ್ಬ ಭಾರತೀಯನು ಧ್ಯಾನಿಸಬೇಕಾದ ದಿನವೇ ಚಿಕಾಗೋ ಭಾಷಣ ದಿನ.

**ಸ್ವಾಮಿ ವಿವೇಕಾನಂದರ ವಿಶ್ವವಿಖ್ಯಾತ ಚಿಕಾಗೋ ಉಪನ್ಯಾಸದ 126ನೇ ವರ್ಷದ ಪ್ರಯುಕ್ತ ವಿಶೇಷ ಲೇಖನ.**

**ದಿನಾಂಕ 11 ಸೆಪ್ಟೆಂಬರ್ ಭಾರತೀಯ ಇತಿಹಾಸದಲ್ಲಿ ಅತ್ಯಂತ ಅವಿಸ್ಮರಣೀಯ ಪುಣ್ಯದಿನ.**

ಅಮೇರಿಕಾದ ಸಹೋದರ–ಸಹೋದರಿಯರೆ ಎಂಬುದೇ ಮೊದಲ ಮಾತು, ತಕ್ಷಣ ಸಭಾಂಗಣದಲ್ಲಿ ಕುಳಿತ ಸಭಿಕರಲ್ಲಿ ನವಸ್ಫೂರ್ತಿ ಸಂಚಾರವಾದಂತಾಯಿತು, ಆವೇಶಭರಿತರಾಗಿ ಕರತಾಡನ ಮಾಡುತ್ತಾ ಸಹಸ್ರಾರು ಜನ ಎದ್ದುನಿಂತು ಜೋರಾಗಿ ಜಯಘೋಷ ಮಾಡುತ್ತಾ ಕರವಸ್ತ್ರ, ಹ್ಯಾಟ್ಗಳನ್ನೂ ಬೀಸುತ್ತಿದ್ದರು, ಸ್ವಾಮೀಜಿ ತಮ್ಮ ಮಾತನ್ನು ಮುಂದುವರಿಸಲು ಪ್ರಯತ್ನಮಾಡಿದರು, ಆದರೆ ಸಭಿಕರ ಭಾವಾವೇಶ ಕಡಿಮೆ ಆಗಲಿಲ್ಲ.

'ಎರಡು ಮೂರು ನಿಮಿಷದ ನಂತರ ಸಭೆ ಶಾಂತವಾಯಿತು. ಮತ್ತೆ ಸ್ವಾಮೀಜಿ ತಮ್ಮ ಮಾತನ್ನು ಮುಂದುವರಿಸಿದರು,

ನೀವು ನಮಗೆ ನೀಡಿದ ಉತ್ಸಾಹಯುತ ಆದರದ ಸ್ವಾಗತಕ್ಕೆ ಪ್ರತಿಕ್ರಿಯಿಸಲು ಹೊರಟಾಗ ಅನಿರ್ವಚನೀಯ ಆನಂದವೊಂದು ನನ್ನ ಹೃದಯವನ್ನು ತುಂಬುತ್ತದೆ. ಪ್ರಪಂಚದ ಅತ್ಯಂತ ಪ್ರಾಚೀನವಾದ ಸನ್ಯಾಸಿಗಳ ಸಂಘದ ಪರವಾಗಿ ನಾನು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಬೌದ್ಧಧರ್ಮ, ಜೈನಧರ್ಮಗಳೂ ಯಾವುದರ ಶಾಖೆಗಳು ಮಾತ್ರವೋ ಅಂತಹ ಸಕಲ ಧರ್ಮಗಳ ಮಾತೆಯಾದ ಹಿಂದೂಧರ್ಮದ ಪರವಾಗಿ ನಾನು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಮತ್ತು ವಿವಿಧ ಜಾತಿಮತಗಳಿಗೆ ಸೇರಿದ ಕೋಟ್ಯಾನು ಕೋಟಿ ಹಿಂದುಗಳ ಪರವಾಗಿ ನಾನು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅಲ್ಲದೇ ಇಲ್ಲಿ ಕಂಡುಬರುತ್ತಿರುವ ಸಹಿಷ್ಣುತಾ ಭಾವವನ್ನು ದೂರದೂರದ ದೇಶಗಳಿಂದ ಬಂದಿರುವ ಈ ಪ್ರತಿನಿಧಿಗಳು ತಮ್ಮೊಂದಿಗೆ ಒಯ್ದು ಪ್ರಸಾರಮಾಡುತ್ತಾರೆ ಎಂದು ಸಾರಿದ ಈ ವೇದಿಕೆಯ ಮೇಲಿನ ಕೆಲವು ಭಾಷಣಕಾರರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಜಗತ್ತಿಗೆ ಸಹಿಷ್ಣುತೆಯನ್ನೂ, ಸರ್ವಧರ್ಮ ಸ್ವೀಕಾರಭಾವವನ್ನೂ ಬೋಧಿಸಿದ ಧರ್ಮಕ್ಕೆ ಸೇರಿದವನು ನಾನೆಂಬ ಹೆಮ್ಮೆ ನನ್ನದು. ನಾವು ಸರ್ವಮತ ಸಹಿಷ್ಣುತೆಯನ್ನು ಒಪ್ಪುತ್ತೇವಷ್ಟೇ ಅಲ್ಲದೇ, ಸಕಲ ಧರ್ಮಗಳೂ ಸತ್ಯವೆಂದು ನಂಬುತ್ತೇವೆ. ಯಾವ ಧರ್ಮದ ಪವಿತ್ರಭಾಷೆಗೆ ಬಹಿಷ್ಕಾರ ಹಾಕುವುದು ಎಂಬ ಪದವನ್ನು ಅನುವಾದಿಸಲು ಸಾಧ್ಯವೇ ಇಲ್ಲವೋ ಅಂತಹ ಧರ್ಮಕ್ಕೆ ಸೇರಿದ ಹೆಮ್ಮೆ ನನ್ನದು, (ಸಭಿಕರ ಕರತಾಡನ). ಪ್ರಪಂಚದ ಎಲ್ಲಾ ಧರ್ಮಗಳ ಎಲ್ಲಾ ರಾಷ್ಟ್ರಗಳ ಸಂಕಟಪೀಡಿತ ನಿರಾಶ್ರಿತರಿಗೆ ಆಶ್ರಯವನ್ನಿತ್ತ ರಾಷ್ಟ್ರಕ್ಕೆ ಸೇರಿದವನೆಂಬ ಹೆಮ್ಮೆ ನನ್ನದು. ರೋಮನ್ನರ ದಬ್ಬಾಳಿಕೆಗೆ ಗುರಿಯಾಗಿ ತಮ್ಮ ಪವಿತ್ರ ದೇವಾಲಯವು ನುಚ್ಚುನೂರಾದಾಗ ದಕ್ಷಿಣ ಭಾರತಕ್ಕೆ ವಲಸೆ ಬಂದ ಇಸ್ರೇಲಿಯರ ಒಂದು ಗುಂಪನ್ನು ನಮ್ಮ ಮಡಿಲಲ್ಲಿಟ್ಟುಕೊಂಡು ಆಶ್ರಯ ನೀಡಿದ್ದೇವೆ ಎಂದು ಹೇಳಲು ನನಗೆ ಹೆಮ್ಮೆ. ಘನ ಜರತುಷ್ಟ್ರ ಜನಾಂಗದ ಅವಶೇಷಕ್ಕೆ

ಪುಟ 7 ಕ್ಕೆ ➢

➢ ಪುಟ 6 ರಿಂದ..... ಸ್ವಾಮಿ ವಿವೇಕಾನಂದ...

ಆಶ್ರಯವಿತ್ತ ಹಾಗೂ ಅವರನ್ನು ಈಗಲೂ ಪೋಷಿಸುತ್ತಿರುವ ಧರ್ಮಕ್ಕೆ ಸೇರಿದವನೆಂಬ ಹೆಮ್ಮೆ ನನ್ನದು.

ಸೋದರರೆ, ನಾನು ಬಾಲ್ಯಾರಂಭದಿಂದ ಪಠಿಸುತ್ತಿದ್ದ, ಮತ್ತು ಈಗಲೂ ಲಕ್ಷಾಂತರ ಹಿಂದೂಗಳು ಪಠಿಸುವ ಶ್ಲೋಕವೊಂದರಿಂದ ಕೆಲ ಸಾಲುಗಳನ್ನು ನಿಮಗೆ ಉದ್ಧರಿಸಿ ಹೇಳುತ್ತೇನೆ:

**ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ ।**
**ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ ॥**
**ರುಚೀನಾಂ ವೈಚಿತ್ರ್ಯಾತ್–ಋಜು–ಕುಟಿಲ ನಾನಾ ಪಥ ಜುಷಾಂ ।**
**ನೃಣಾಮೇಕೋ ಗಮ್ಯಃ ತ್ವಮಸಿ ಪಯಸಾಂ ಅರ್ಣವ ಇವ ॥**

ಎಂದರೆ, ಹೇ ಭಗವಂತ ! ಭಿನ್ನ ಭಿನ್ನ ಸ್ಥಾನಗಳಿಂದುದಿಸಿದ ನದಿಗಳೆಲ್ಲವೂ ಹರಿಯುತ್ತ ಹೋಗಿ ಕೊನೆಗೆ ಸಾಗರದೊಳಗೆ ಒಂದಾಗುವಂತೆ, ಮಾನವರು ತಮ್ಮ ತಮ್ಮ ವಿಭಿನ್ನ ಅಭಿರುಚಿಗಳಿಂದಾಗಿ ಅನುಸರಿಸುವ ಅಂಕುಡೊಂಕಿನ ಬೇರೆ ಬೇರೆ ದಾರಿಗಳೆಲ್ಲವೂ ಕೊನೆಗೆ ನಿನ್ನನ್ನೇ ಬಂದು ಸೇರುತ್ತವೆ.

ಜಗತ್ತಿನಲ್ಲಿ ಇಲ್ಲಿಯವರೆಗೆ ನಡೆಸಲ್ಪಟ್ಟಿರುವ ಮಹಾದ್ಭುತ ಸಮ್ಮೇಳನಗಳಲ್ಲಿ ಒಂದಾದ ಇಂದಿನ ಸಭೆಯು, ಭಗವದ್ಗೀತೆಯು ಬೋಧಿಸಿರುವ ಈ ಅದ್ಭುತ ತತ್ತ್ವಕ್ಕೆ ಸಾಕ್ಷಿಯಾಗಿದೆ. ಮತ್ತು ಅದನ್ನೇ ಸಾರುತ್ತದೆ.

**ಯೇ ಯಥಾಂ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ ।**
**ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥**

**ಅರ್ಥ:** ಯಾರು ಯಾರು ನನ್ನಲ್ಲಿಗೆ ಯಾವ ಯಾವ ಮಾರ್ಗದಿಂದ ಬರುತ್ತಾರೋ ಅವರವರನ್ನು ಅದದೇ ಮಾರ್ಗದಿಂದ ತಲುಪುತ್ತೇನೆ. ಮಾನವರು ಅನುಸರಿಸುವ ಮಾರ್ಗಗಳೆಲ್ಲ ಕೊನೆಯಲ್ಲಿ ನನ್ನನ್ನೇ ಬಂದು ಸೇರುತ್ತವೆ.

ಗುಂಪುಗಾರಿಕೆ, ಅತಿಯಾದ ಸ್ವಮತಾಭಿಮಾನ ಹಾಗೂ ಅದರ ಘೋರ ಪರಿಣಾಮವಾದ ಧರ್ಮಾಂಧತೆಗಳು ಬಹುಕಾಲದಿಂದ ಈ ಸುಂದರ ಪೃಥ್ವಿಯನ್ನು ಆಕ್ರಮಿಸಿಕೊಂಡಿವೆ. ಅವು ಭೂಮಿಯನ್ನು ಹಿಂಸೆಯಿಂದ ತುಂಬಿ ಮತ್ತೆ ಮತ್ತೆ ಮಾನವನ ರಕ್ತದಿಂದ ತೋಯಿಸಿವೆ, ನಾಗರೀಕತೆಗಳನ್ನು ನಾಶಮಾಡಿವೆ, ದೇಶ ದೇಶಗಳನ್ನೇ ನಿರಾಶೆಯ ಕೂಪಕ್ಕೆ ತಳ್ಳಿವೆ. ಆ ಘೋರ ರಾಕ್ಷಸತನವಿಲ್ಲದಿದ್ದಲ್ಲಿ ಮಾನವನ ಸಮಾಜವು ಈಗಿರುವುದಕ್ಕಿಂತಲೂ ಎಷ್ಟೋ ಹೆಚ್ಚು ಮುಂದುವರೆಯುತ್ತಿತ್ತು. ಆದರೆ ಈಗ ಆ ರಾಕ್ಷಸತನದ ಅಂತ್ಯಕಾಲ ಸಮೀಪಿಸಿದೆ. ಈ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ಇಂದು ಬೆಳಿಗ್ಗೆ ಮೊಳಗಿದ ಘಂಟಾನಾದವು ಎಲ್ಲಾ ಮತಾಂಧತೆಗೆ ಮೃತ್ಯುಘಾತವನ್ನೀಯುವುದೆಂದು ಆಶಿಸುತ್ತೇನೆ.(ಕರತಾಡನ). ಮತ್ತು ಅದು ಖಡ್ಗ –ಲೇಖನಿಗಳ ಮೂಲಕ ಸಂಭವಿಸುವ ಹಿಂಸಾದ್ವೇಷಗಳಿಗೆ ಹಾಗೂ ಒಂದೇ ಗುರಿಯೆಡೆಗೆ ಸಾಗುತ್ತಿರುವ ಪಥಿಕರೊಳಗಿನ ಅಸಹನೆ ಮನಸ್ತಾಪಗಳಿಗೆ ಮೃತ್ಯುಘಾತವನ್ನೀಯುವುದೆಂದು ಹೃತ್ಪೂರ್ವಕವಾಗಿ ಆಶಿಸುತ್ತೇನೆ.

ಹೀಗೆ ತಮ್ಮ ಉಪನ್ಯಾಸ ಮುಗಿಸಿ ಸ್ವಾಮೀಜಿ ತಮ್ಮ ಸ್ಥಳದಲ್ಲಿ ಆಸೀನರಾದರು, ಸಭಿಕರ ಕರತಾಡನ ಸಿಡಿಲಿನಂತೆ ಮೊಳಗಿದವು. ಆ ಮಾತುಗಳು ಮರುಭೂಮಿಯಲ್ಲಿ ಇದ್ದ ಮನುಷ್ಯನಿಗೆ ನೀರು ಸಿಕ್ಕಂತೆ ಇತ್ತು, ಈಜಲು ಬಾರದ ವ್ಯಕ್ತಿಗೆ ಸರೋವರದಲ್ಲಿ ದಡ ಸಿಕ್ಕ ಹಾಗೆ ಎನಿಸಿತು.

ಅವರ ಮಾತುಗಳನ್ನು ಆಲಿಸಿದ ನಂತರ ಅನೇಕರು ಅವರನ್ನೊಮ್ಮೆ ಮುಟ್ಟಲು ಧಾವಿಸಿ ಬರಲಾರಂಭಿಸಿದರು.

ಯಾವ ಶಕ್ತಿ ಆ ಮಹಾಪುರುಷನ ಮಾತನ್ನು ಆ ಜನರೆಲ್ಲ ಕೇಳುವ ಹಾಗೆ ಮಾಡಿತು ಎಂಬುದೇ ಒಂದು ಚಿಂತನೆಯ ಸಂಗತಿ, ಆ ಶಕ್ತಿಯ ಅರಿವು ನಮಗೆ ಆಗಬೇಕಾದರೆ ಈ ಕೆಳಗಿನ ನಿದರ್ಶನ ಓದಲೇಬೇಕು,

ಒಂದೇ ದಿನದಲ್ಲಿ ಜಗತ್ಪ್ರಸಿದ್ಧರಾದ ಸ್ವಾಮೀಜಿ ಅವರ ಮನಃಸ್ಥಿತಿ ಸೆಪ್ಟೆಂಬರ್ 11 ಯಾವ ಭಾವದಿಂದ ತುಂಬಿಕೊಂಡಿತ್ತು? ಅಂದು ರಾತ್ರಿ ಒಬ್ಬ ಶ್ರೀಮಂತನ ಮನೆಯಲ್ಲಿ ಸ್ವಾಮೀಜಿ ಉಳಿದುಕೊಂಡಿದ್ದರು. ತಮಗಾಗಿ ಬಿಟ್ಟುಕೊಟ್ಟಿದ್ದ ವೈಭವೋಪೇತವಾದ ಕೊಠಡಿಯಲ್ಲಿ ಮಲಗಿದರು, ತಕ್ಷಣವೇ ಅವರ ಹೃದಯದಲ್ಲಿ ಇದ್ದ ಭಾವನೆಗಳೆಲ್ಲ ಒತ್ತರಿಸಿ ಬಂದು ನುಡಿಯುತ್ತಾರೆ, ಓ ತಾಯಿ ! ನನಗೇಕೆ ಈ ಕೀರ್ತಿ, ನನಗೇಕೆ ಈ ವೈಭೋಗ, ಅಲ್ಲಿ (ಭಾರತದಲ್ಲಿ) ನನ್ನ ಸೋದರರು ಅಸಂಖ್ಯಾತ ಜನ, ಒಂದು ಹೊತ್ತು ಊಟಕ್ಕೂ ಗತಿಯಿಲ್ಲದೆ ಪಶುಗಳಂತೆ ಜೀವಿಸುತ್ತಿರುವಾಗ ಈ ಹೆಸರು ಕೀರ್ತಿಗಳಿಂದ ನನಗೆ ಆಗಬೇಕಾದ್ದೇನು, ಎಂದು ಕಣ್ಣೀರು ಸುರಿಸುತ್ತಾ ಹಲುಬಿದರು. ಉಕ್ಕಿ ಹರಿದ ಕಣ್ಣೀರು ದಿಂಬನ್ನು ತೋಯಿಸಿತು. ಅಸಹನೀಯ ಸಂಕಟದಿಂದಾಗಿ ಆ ರಾಜಯೋಗ್ಯ ಹಾಸಿಗೆಯು ಶರಶಯ್ಯೆಯಂತೆ ಭಾಸವಾಯಿತು. ಅದರ ಮೇಲೆ ಮಲಗಲಾರದೆ ಸ್ವಾಮೀಜಿ ನೆಲದ ಮೇಲೆ ಉರುಳಿಕೊಂಡರು. ಅಮ್ಮಾ, ಈ ಹೆಸರು ಕೀರ್ತಿ ಗೌರವಗಳನ್ನೆಲ್ಲ ನೀನೇ ಇಟ್ಟುಕೊ. ಬದಲಾಗಿ ನಾನು ನನ್ನ ದೇಶಬಾಂಧವರ 'ಶೋಕವನ್ನು ಶಮನಮಾಡಲಾಗುವಂತೆ ನನಗೆ ನೆರವಾಗು' ಎಂದು ಪ್ರಾರ್ಥಿಸಿದರು.

ಈ ಅಂತರಾಳದ ಮಾನವನ ಏಳ್ಗೆಯ ಭಾವನೆಗಳಿಂದಾಗಿಯೇ ಅವರನ್ನು ಜನರು ಸ್ವೀಕರಿಸಲು ಸಾಧ್ಯವಾದದ್ದು.

ಇಂದು ನಾವು ಸ್ವಾಮಿ ವಿವೇಕಾನಂದರ ಭಾವಗಳನ್ನು ನಮ್ಮಲ್ಲಿ ತುಂಬಿಕೊಳ್ಳುವ ಅವಶ್ಯಕತೆ ಬಹಳವಾಗಿ ಇದೆ. ಹೃದಯ ಬತ್ತಿ ಹೋಗಿರುವ ಈ ಸಂಧರ್ಭದಲ್ಲಿ ನಾವೆಲ್ಲರೂ ಸ್ವಾಮೀಜಿಯ 3 ನಿಮಿಷದ ಮಾತುಗಳನ್ನು ಧ್ಯಾನಿಸುವ, ಭಾವಿಸುವ ಪರ್ವ ಕಾಲ ಆಗಮಿಸಿದೆ. ಬನ್ನಿ ಎಲ್ಲರೂ ಸ್ವಾಮಿ ವಿವೇಕಾನಂದರಾಗಲು ಪ್ರಯತ್ನ ಮಾಡೋಣ. ಆ ತ್ಯಾಗಿಯ ಜೀವನದಿಂದ ಸ್ಫೂರ್ತಿ ಪಡೆದು ನಾವು ಮಹತ್ಕಾರ್ಯ ಮಾಡೋಣ.

ಸ್ವಾಮಿ ವಿವೇಕಾನಂದರು ಚಿಕಾಗೋ ಉಪನ್ಯಾಸಮಾಡಿ ಇಂದಿಗೆ 125 ವರ್ಷಗಳು ತುಂಬಿದವು, ಈ ಶುಭ ದಿನ ನಾವು ಕನಿಷ್ಠ ಈ ಉಪನ್ಯಾಸವನ್ನು 125 ಬಾರಿ ಭಾವಿಸುತ್ತಾ ಓದುವ ಸಂಕಲ್ಪ ಹಾಗೂ 125 ಜನ ಸ್ನೇಹಿತರಿಗೆ ಈ ಉಪನ್ಯಾಸ ಕಳಿಸುವ ಸಂಕಲ್ಪ ಮಾಡೋಣ.

ಜೈ ಸ್ವಾಮಿ ವಿವೇಕಾನಂದ.

ಚಿಕಾಗೋದ ಧರ್ಮಸಂಸತ್ತಿನಲ್ಲಿ ವಿಶ್ವದ ಎಲ್ಲಾ ಪಂಡಿತರ ಧರ್ಮಪ್ರಮುಖರ ಮಧ್ಯ ಕುಳಿತ ಕಿರಿವಯಸ್ಸಿನ ಈ ಹಿಂದೂಯೋಗಿ ಇಡಿ ಭಾರತೀಯತೆಯ ವೇದ ಉಪನಿಷತ್ ಪುರಾಣ ಐತಿಹ್ಯಗಳ ಮಹತ್ವ ಸಾರುವ ಹಿಂದೂಸ್ಥಾನದ ಮಹೋನ್ನತ ಸಂಸ್ಕೃತಿಯ

ಪುಟ 9 ಕ್ಕೆ ➢



# ಮೈಸೂರು ದಸರಾ ಎಷ್ಟೊಂದು ಸುಂದರಾ

**ಆರ್. ಸೀತಾಲಕ್ಷ್ಮಿ**
**ಪೋಷಕರು**
**ಮಹಿಳಾ ವಿಭಾಗ**
**ಶಿಕ್ಷಕ ಸಂಘ**



ಶಾಲೆಯ ಪಠ್ಯೇತರ ಚಟುವಟಿಕೆಯ ಪೀರಿಯಡ್‌ನಲ್ಲಿ 'ಮೈಸೂರು ದಸರಾ ಎಷ್ಟೊಂದು ಸುಂದರ' ಕರುಳಿನ ಕರೇ ಚಿತ್ರದ ಹಳೇ ಹಾಡು ರೇಡಿಯೋನಲ್ಲಿ ಕೇಳಿ ಬರುತ್ತಿತ್ತು. ಒಬ್ಬ ವಿದ್ಯಾರ್ಥಿ ತರಗತಿಯಲ್ಲಿ ಶಿಕ್ಷಕರನ್ನು 'ಸಾರ್ ದಸರಾ ಅಷ್ಟೊಂದು ವಿಶೇಷವೇ' ಎಂದು ಕೇಳಿದನು. ಶಿಕ್ಷಕರು ಹೌದು ಎಂದು, ಅದರ ವಿವರಣೆಯನ್ನು ಹೇಳತೊಡಗಿದರು.

"ದಸರಾ" ಹತ್ತು ದಿನಗಳ ವೈಭವೋಪೇತವಾದ, ವಿಜೃಂಭಣೆಯಿಂದ ನಡೆಯುವ ನಾಡಹಬ್ಬ. ಈ ಹಬ್ಬವನ್ನು ಎರಡು ಭಾಗವಾಗಿ ನೋಡಬಹುದು.

**1. ನವರಾತ್ರಿ :** ಅರಮನೆಯ ಸಂಸ್ಕೃತಿ, ವಿಧಿವಿಧಾನಗಳು.

**2. ವಿಜಯದಶಮಿ :** ಸರ್ವರಿಗೂ ಮುಕ್ತವಾಗಿ ಅನಾವರಣಗೊಳ್ಳುವ ಸಾರ್ವಜನಿಕ ಹಬ್ಬ. ನಮ್ಮ ಸಂಸ್ಕೃತಿ, ಧಾರ್ಮಿಕ ಪರಂಪರೆಯನ್ನು ಬಿಂಬಿಸುವ , ಕೆಡುಕಿನ ಮೇಲೆ ಒಳಿತು ವಿಜಯ ಸಾಧಿಸುವ ಮಹೋತ್ಸವವೇ 'ವಿಜಯ ದಶಮಿ'

'ಮೈಸೂರು ದಸರ' ಎಂದೇ ಪ್ರಸಿದ್ಧಿಯಾಗಿದೆ. ದಸರ ದೇಶದ ಹಲವು ಕಡೆ ಬೇರೆ ಬೇರೆ ರೂಪದಲ್ಲಿ ನಡೆದರೂ ಮೈಸೂರು ದಸರೆಯ ವಿಷಯವೇ ಬೇರೆ. ವೈಭವ– ವೈಭೋಗವೇ ಬೇರೆ. ಇಡೀ ವಿಶ್ವವೇ ಬೆಕ್ಕಸ ಬೆರಗಾಗಿ ಮೈಸೂರಿನತ್ತ ನೋಡುವಂತಹದ್ದು. ಯಾರಿಗೇ ಆಗಲಿ ಮೈಮನ ಪುಲಕಿತಗೊಂಡು ರೋಮಾಂಚನವಾಗುವುದರಲ್ಲಿ ಆಶ್ಚರ್ಯವಿಲ್ಲ. ಮಿತಿ ಮೀರಿದ ಆನಂದ ಕಣ್ಮುಂದೆ. ಚೆಂದದ ಮೈಸೂರು, ಅಂದದ ಅರಮನೆ, ಚಿನ್ನದ ಅಂಬಾರಿಗಳು ಮನಸೆಳೆಯುವ ರತ್ನ ಸಿಂಹಾಸನ, ಸಿಂಹಾಸನಾಧೀಶರಾಗಿ ಮೆರೆದ ರಾಜರುಗಳು ಅವರ ವೈಭೋಗ, ನೆನಪುಗಳು ಸರಮಾಲೆಯಾಗಿ ಕಣ್ಮುಂದೆ ತೇಲಿ ಬರುವಂತಹವು. ಇದರ ಜೊತೆಗೆ ಮೈಸೂರು ದಸರಾದ ಜಂಬೂ ಸವಾರಿಯಂತೂ ಮತ್ತೆ ಮತ್ತೆ ಕಣ್ಣಿಗೆ ಕಟ್ಟಿ ನೆನಪಿನ ಪರದೆಯಲ್ಲಿ ಹಾದುಹೋಗುತ್ತದೆ. ಇದೇ ನೋಡಿ ಮೈಸೂರು ದಸರಾದ ವೈಶಿಷ್ಟ್ಯತೆ.

ಈ ಹಬ್ಬಕ್ಕೆ 4 ಶತಮಾನಗಳ ಸಾಂಸ್ಕೃತಿಕ ಹಿರಿಮೆಯುಂಟು. ವಿಜಯನಗರದ ಅರಸರಲ್ಲಿ ಅತ್ಯಂತ ಪ್ರಖ್ಯಾತರಾದ ಶ್ರೀ ಕೃಷ್ಣದೇವರಾಯರು ಉತ್ಕೃಷ್ಟ ಸಾಮ್ರಾಜ್ಯ ಕಟ್ಟಿ ಸ್ವರ್ಣಯುಗ ಸೃಷ್ಟಿಸಿ ಈ ಹಬ್ಬಕ್ಕೆ ಹೆಚ್ಚಿನ ವೈಭವದ ಕಳೆತಂದುಕೊಟ್ಟರು. ಹಂಪೆಯ ಮಹರ್ನವಮಿಯ ದಿಬ್ಬ ಮತ್ತು ವಿಜಯ ವಿಠ್ಠಲನ ದೇವಾಲಯಗಳು ಈ ಮಹೋತ್ಸವದ ಕೇಂದ್ರಗಳಾಗಿದ್ದವು. ತಮ್ಮ ಸಾಮ್ರಾಜ್ಯದ ಶಕ್ತಿ, ಸಾಮರ್ಥ್ಯ, ಸಂಪತ್ತು, ಸಮೃದ್ಧಿ, ವೈಭವ, ವೀರತ್ವ ಹಾಗೂ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ನೃತ್ಯ, ಸಂಸ್ಕೃತಿ, ಸಂಪನ್ನತೆ ಹೀಗೆ ಸಕಲ ವಿಧಗಳಲ್ಲೂ ತಮ್ಮ ಹಿರಿಮೆ, ಗರಿಮೆಗಳನ್ನು ತೋರಿಸಿಕೊಳ್ಳುವ ಮೂಲಕ ಬಹುಮುಖ್ಯವಾಗಿ ವಿಜಯದ್ಯೋತಕವಾಗಿ 'ವಿಜಯದಶಮಿ' ಉತ್ಸವವನ್ನು ಆಚರಿಸುತ್ತಿದ್ದರು. ಇಷ್ಟೇ ಅಲ್ಲ ಈ ಉತ್ಸವವನ್ನು ವೀಕ್ಷಿಸಲು ದೇಶ ವಿದೇಶಗಳ ಗಣ್ಯಾತಿಗಣ್ಯರು ಅಲ್ಲಿಗೆ ಬಂದು ಭೇಟಿ ನೀಡಿ ದಸರಾವನ್ನು ಕಣ್ತುಂಬಿಸಿಕೊಳ್ಳುತ್ತಿದ್ದರು.

11ನೇ ಶತಮಾನದಲ್ಲಿ ಪರ್ಷಿಯಾದ ಅಬ್ದುಲ್ ರಜಾಕ್, ಇಟಲಿಯ ನಿಕೋಲಕೊಂಟಿ, ಪೋರ್ಚುಗೀಸ್‌ನ ಡೊಮಿಂಗೋ ಮೊದಲಾದವರು ವಿಜಯನಗರ ಸಾಮ್ರಾಜ್ಯದ ವೈಭವೋಪೇತವಾದ ಈ ಮಹೋತ್ಸವವನ್ನು ಕೊಂಡಾಡಿ ನಮ್ಮ ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ. ಚಾರಿತ್ರಿಕ ಹಿನ್ನೆಲೆಯಲ್ಲಿ ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಅರಸರ ಕೊಡುಗೆ ಇದೆ.

ಈ ದಸರಾ ಮಹೋತ್ಸವವನ್ನು ವಿಜಯನಗರ ಸಾಮ್ರಾಜ್ಯದ ಪತನದ ನಂತರ 'ಯದು' ವಂಶದ ಒಡೆಯರು ಮುಂದುವರಿಸಿಕೊಂಡು ಬಂದಿದ್ದಾರೆ. ಇದರಲ್ಲಿ 9ನೇ ಆಳ್ವಿಕೆಯ ರಾಜ ಒಡೆಯರು (1578–1617) ಅಂದು ತಮ್ಮ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲಿ 1610ರಲ್ಲಿ ವಿಜಯದಶಮಿ ದಸರಾ ಮಹೋತ್ಸವವನ್ನು ಆರಂಭಿಸಿದರು. 1799 ರವರೆಗೆ ಈ ಮಹೋತ್ಸವ ಶ್ರೀರಂಗಪಟ್ಟಣದಲ್ಲಿಯೇ ನಡೆಯುತ್ತಿತ್ತು. ಯದುಕುಲತಿಲಕ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆ (1799–1868) ಕಾಲದಲ್ಲಿ ಶ್ರೀರಂಗ ಪಟ್ಟಣದಿಂದ ಮೈಸೂರಿಗೆ ವರ್ಗಾಹಿಸಿದರು. 1800ರಲ್ಲಿ ಪ್ರಾರಂಭವಾದ ಈ ಹಬ್ಬ 'ಮೈಸೂರು–ದಸರಾ' ಎಂದು ವಿಶ್ವವಿಖ್ಯಾತವಾಯಿತು.

ವಿಜಯದಶಮಿಯ ದಿನ ಮಧ್ಯಾಹ್ನ ಮಹಾರಾಜರು ಅಲಂಕೃತ ಆನೆಯ ಮೇಲೆ ಚಿನ್ನದ ಅಂಬಾರಿ ಏರಿ ಅರಮನೆಯಿಂದ ಹೊರಟು ಬನ್ನಿ ಮಂಟಪಕ್ಕೆ ತೆರಳಿ ಬನ್ನಿಪೂಜೆ ಮಾಡಿ ಧ್ವಜಹಾರಿಸಿ ಬಂದ ಮಾರ್ಗದಲ್ಲೇ ವಾಪಸ್ಸಾಗುತ್ತಿದ್ದುದು ಪ್ರಮುಖ ಆಕರ್ಷಣೆಯಾಗಿತ್ತು.

ಪುರಾಣಗಳಲ್ಲಿ ದಸರಾ ವಿಶೇಷ ಗಮನಿಸಿದರೆ "This festival celebrates the battle and victory of god Ram over the demon Ravana".

**ಪುಟ 10 ಕ್ಕೆ ➤**

➢ ಪುಟ 5 ರಿಂದ..... ಗಾಂಧೀಜಿ...

ಬಿನ್ನವತ್ತಳೆಯನ್ನು ಗಾಂಧೀಜಿಯವರಿಗೆ ಸಮರ್ಪಿಸಲಾಯ್ತು. ಹಿಂದಿ ಭಾಷೆಯಲ್ಲಿ ಈ ಬಿನ್ನವತ್ತಳೆಯನ್ನು 9 ವರ್ಷದ ಹುಡುಗಿಯೊಬ್ಬಳು ಓದಿದಳು ಬಾಲಿಕೆ ನಿರುಪಮ. ನಿರುಪಮಾ ಶ್ರದ್ಧಾವಂತ ಕಾಂಗ್ರೆಸ್ ಕಾರ್ಯಕರ್ತ ದಂಪತಿಗಳ ಮಗಳು. ಅವಳಿಗೆ ತೀರ ಚಿಕ್ಕವಯಸ್ಸಿನಿಂದಲೇ ಅಪ್ಪ, ಅಮ್ಮ ಹಿಂದಿಯನ್ನು ಓದುವುದು, ಬರೆಯುವುದು, ಮಾತನಾಡುವುದನ್ನು ಕಲಿಸಿದ್ದರು.

ನಿರುಪಮ ಬಿನ್ನವತ್ತಳೆ ಓದುವುದನ್ನು ಮುಗಿಸಿ ಅದನ್ನು ಗಾಂಧೀಜಿಗೆ ಕೊಡುತ್ತಿರುವಾಗ ಅವರು" ಮಗೂ ಈ ಬಿನ್ನವತ್ತಳೆ ಫಲಕದೊಂದಿಗೆ ನೀನು ಧರಿಸಿರುವ ಚಿನ್ನದ ಆಭರಣಗಳನ್ನು ಕೊಡುವೆಯಾ?" ಎಂದು ಕೇಳಿದರು. ಕೂಡಲೇ ನಿರುಪಮ ತನ್ನ ಕುತ್ತಿಗೆಯಲ್ಲಿದ್ದ ಸರವನ್ನು ಗಾಂಧೀಜಿಯವರ ಕೈಗಿಟ್ಟಳು. ಅವಳ ಕೈಬಳೆಗಳತ್ತ ದೃಷ್ಟಿ ಹರಿಸಿದ ಬಾಪು " ಇದನ್ನೇನು ಮಾಡುತ್ತೀ?" ಎಂದು ಕೇಳಿದರು. ತಕ್ಷಣ ಮಗು ಬಳೆಗಳನ್ನು ಬಿಚ್ಚಿಕೊಳ್ಳಲು ತನ್ನ ಕೈಗಳನ್ನು ಗಾಂಧೀಜಿಯತ್ತ ಚಾಚಿತು. ಆದರೆ ಅವಳ ಕಣ್ಣೀರಿನ ಹನಿ ಕೆನ್ನೆಗಳನ್ನು ದಾಟಿ ಹರಿಯುತ್ತಿತ್ತು. ಕಣ್ಣೀರನ್ನು ಕಂಡ ಗಾಂಧೀಜಿ, ಬಳೆಗಳನ್ನು ಅವಳಿಗೇ ಹಿಂದಿರುಗಿಸುತ್ತಾ ಅವಳ ಮೃದುವಾದ ಕೆನ್ನೆಯನ್ನು ಸವರಿ "ಮಗೂ, ನೀನು ಅಳುತ್ತಿರುವೆ. ಅಳುತ್ತಾ ಕೊಡುವ ಉಡುಗೊರೆಯನ್ನು ನಾನು ಸ್ವೀಕರಿಸುವುದಿಲ್ಲ" ಎಂದರು. ಆ ಸಮಯದಲ್ಲಿ ನಿರುಪಮಳ ತಂದೆ ತಾಯಿ ಅಲ್ಲಿರಲಿಲ್ಲ. ಅವರು ಉಡುಪಿಯಲ್ಲಿನ ಗಾಂಧೀಜಿಯವರ ವಾಸ್ತವ್ಯದ ವ್ಯವಸ್ಥೆಯಲ್ಲಿ ಮಗ್ನರಾಗಿದ್ದರು.

ಸಮಾರಂಭದ ನಂತರ ಗಾಂಧೀಜಿ ತಮ್ಮ ಸಹಕಾರಿಗಳೊಂದಿಗೆ, ನಿರುಪಮಳನ್ನು ಕರೆದುಕೊಂಡು ಅವರ ಮನೆಗೆ ಬಂದರು. ನಡೆದ ಘಟನೆಯನ್ನು ತಿಳಿದ ನಿರುಪಮಳ ತಾಯಿ ಮಗಳಿಗೆ ಎಲ್ಲ ಆಭರಣಗಳನ್ನೂ ಕೊಡುವಂತೆ ಹೇಳಿದರು. ಕೂಡಲೇ ಅವಳು ಸಂತೋಷದಿಂದ ತನ್ನ ಕೈಬಳೆಗಳನ್ನು ತೆಗೆದು ಗಾಂಧೀಜಿಯವರ ಕೈಲಿಟ್ಟಳು. ನಂತರ ಅವಳ ಕೈ ತನ್ನ ಕಿವಿಯೋಲೆಗಳನ್ನು ಬಿಚ್ಚುವತ್ತ ಹೋಯಿತು. ಅದನ್ನು ಕಂಡ ಗಾಂಧೀಜಿ "ಮಗೂ ಈಗ ಕೊಟ್ಟಿರುವುದು ಸಾಕು, ನಿನ್ನ ತ್ಯಾಗದಿಂದ ನನಗೆ ಅತೀವ ಆನಂದವಾಗಿದೆ. ಕಿವಿಯೋಲೆ ನಿನ್ನಲ್ಲೇ ಇರಲಿ. ಆದರೆ ಮುಂದೆಂದೂ ನೀನು ಆಭರಣಗಳನ್ನು ತೊಡುವುದಿಲ್ಲ ಎಂದು ಭಾಷೆಯನ್ನು ಕೊಡುವಿಯಾ?" ಎಂದರು. ನಿರುಪಮ ಸಂತೋಷದಿಂದ ಗಾಂಧೀಜಿಯವರ ಕೈ ಮೇಲೆ ತನ್ನ ಕೈಯಿಟ್ಟು ಭಾಷೆ ಕೊಟ್ಟಳು.

ಈ ಘಟನೆ ಘಟಿಸಿ 20 ವರ್ಷಗಳು ಉರುಳಿವೆ. ಈಗ ನಿರುಪಮಾ ವೃತ್ತಿನಿರತ ಎಂ.ಬಿ.ಬಿ.ಎಸ್ ಡಾಕ್ಟರ್. ಅಂದು ಗಾಂಧೀಜಿಗೆ ನೀಡಿದ ಮಾತನ್ನು ಉಳಿಸಿಕೊಂಡಿದ್ದಾಳೆ. ಕಿವಿಯೋಲೆ ಹೊರತು ಪಡೆಸಿ ಅವಳ ಮೈಮೇಲೆ ಒಂದು ದವಡಿ ಆಭರಣವೂ ಇಲ್ಲ. ಅನೇಕ ವರ್ಷಗಳವರೆಗೆ ಗಾಂಧೀಜಿ, ನಿರುಪಮಳೊಂದಿಗೆ ಪತ್ರ ವ್ಯವಹಾರ ಮಾಡುತ್ತಿದ್ದರು. ಅವರ ಒಂದು ಪತ್ರ ಹೀಗಿದೆ. "ಚಿರಂಜೀವಿ ನಿರುಪಮಾ, ನಿನ್ನ ಪತ್ರ ಕೈಸೇರಿತು. ನಿನ್ನ ಭಾಷೆ ತುಂಬಾ ಚೆನ್ನಾಗಿದೆ. ಆಭರಣಗಳ ಅವಶ್ಯಕತೆ ಇರುವುದಿಲ್ಲ. ಅವು ಹೆಣ್ಣುಮಕ್ಕಳಲ್ಲಿ ಬಾಹ್ಯ ಸೌಂದರ್ಯದ ಕಡೆ ಆಕರ್ಷಣೆಯನ್ನುಂಟು ಮಾಡುತ್ತದೆ. ಈ ಬಡತನದ ದೇಶದಲ್ಲಿ ಆಭರಣಗಳ ಕಡೆ ಆಕರ್ಷಣೆ ಹೊಂದುವುದು ಸರಿಯೇ? ಆ ಕಾರಣಕ್ಕೇ ನಾನು ಆಭರಣಗಳನ್ನು ತೊಡುವುದಕ್ಕೆ ವಿರೋಧಿಸುವುದು"

ಆಶೀರ್ವಾದಗಳೊಂದಿಗೆ 23–5–1934

●

# ತಪ್ಪು ಮಾಡಿದರೆ ಗಿಡ ನೆಡುವ ಶಿಕ್ಷೆ
# ಗುಜರಾತಿನ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ವಿನೂತನ ಶಿಕ್ಷಣ

ಎಲ್ಲರಿಗೂ ಮಾದರಿ ಎನಿಸುವ ಪರಿಸರ ಸ್ನೇಹಿಯಾದ ಕ್ರಮವನ್ನು ತೆಗೆದುಕೊಂಡಿರುವ ಗುಜರಾತ್ ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಶೈಕ್ಷಣಿಕ ಸಂಸ್ಥೆಯೊಂದು, ತನ್ನ ಆವರಣದಲ್ಲಿ ತಪ್ಪು ಮಾಡುವ ವಿದ್ಯಾರ್ಥಿಗಳಿಗೆ ಗಿಡ ನೆಡುವ ವಿನೂತನ ಶಿಕ್ಷೆಯನ್ನು ನೀಡುತ್ತಿದೆ.

ಗುಜರಾತ್ ರಾಜ್ಯದ ಸೂರತ್‌ನಲ್ಲಿರುವ ಶ್ರೀ ಗಿಜುಭಾಯ್ ಛಗನ್ಭಾಯ್ ಪಟೇಲ್ ಇನ್ಸ್ಟಿಟ್ಯೂಟ್ ಆಫ್ ಆರ್ಕಿಟೆಕ್ಚರ್, ಇಂಟೀರಿಯರ್ ಡಿಸೈನ್ ಆ್ಯಂಡ್ ಫೈನ್ ಆರ್ಟ್ಸ್ ಕಾಲೇಜಿನ ವಾಸ್ತುಶಿಲ್ಪ ವಿಭಾಗದ ವಿದ್ಯಾರ್ಥಿಗಳು ಗಿಡ ನೆಡುವ ಮೂಲಕ ತಮ್ಮ ತಪ್ಪಿಗೆ ಪ್ರಾಯಶ್ಚಿತ್ತವನ್ನು ಕಂಡುಕೊಳ್ಳಬೇಕಾಗಿದೆ. ಈ ಮೂಲಕ ಪ್ರಕೃತಿಯನ್ನು ಉಳಿಸಲು ಕೊಡುಗೆಯನ್ನು ನೀಡಬೇಕಾಗಿದೆ.

ತರಗತಿಗಳಿಗೆ ತಡವಾಗಿ ಬಂದಾಗ, ಅಸೈನ್ಮೆಂಟ್ ಅನ್ನು ಸಮಯಕ್ಕೆ ಸರಿಯಾಗಿ ಸಲ್ಲಿಕೆ ಮಾಡದಿದ್ದಾಗ ಅಥವಾ ಕಾಲೇಜು ಅವಧಿಯಲ್ಲಿ ಮೊಬೈಲ್ ಬಳಸಿದಾಗ ಶಿಕ್ಷೆಯ ಭಾಗವಾಗಿ ಗಿಡವನ್ನು ನೆಡುವುದು ಕಡ್ಡಾಯವಾಗಿದೆ. "ಇದು ಪರಿಸರ ಸ್ನೇಹಿ ಶಿಕ್ಷೆಯಾಗಿರುವುದರಿಂದ ವಿದ್ಯಾರ್ಥಿಗಳು ಶಿಕ್ಷೆಯನ್ನು ಸಂತೋಷದಿಂದ ಸ್ವೀಕರಿಸಿದ್ದಾರೆ. ಪ್ರತಿ ತಪ್ಪಿಗೂ ಅವರು ಸಸಿ ನೆಡಬೇಕು ಮತ್ತು ಅದನ್ನು ಕಾಲೇಜು ತೊರೆಯುವವರೆಗೂ ನೋಡಿಕೊಳ್ಳಬೇಕು. ತಪ್ಪುಗಳನ್ನು ಮಾಡಿದ ವಿದ್ಯಾರ್ಥಿಗಳಿಗೆ ಈ ಅನನ್ಯ ಶಿಕ್ಷೆಯನ್ನು ನೀಡುವುದು ನನ್ನ ಆಶಯವಾಗಿತ್ತು" ಎನ್ನುತ್ತಾರೆ ವಾಸ್ತುಶಿಲ್ಪ ವಿಭಾಗದ ಪ್ರೊಫೆಸರ್ ಮಹೇಶ್ ಪಟೇಲ್.

ಪ್ರತಿ ಬಾರಿ ತಾವು ನೆಟ್ಟ ಗಿಡವನ್ನು ನೋಡಿದಾಗ ತಪ್ಪಿನ ಅರಿವಾಗಿ ತಪ್ಪು ಮತ್ತೊಮ್ಮೆ ಮರುಕಳಿಸದಂತೆ ಅರಿವಾಗುತ್ತದೆ. ತಮ್ಮ ಕೋರ್ಸ್ ಪೂರ್ಣಗೊಂಡ ಬಳಿಕವೂ ಕೆಲವು ವಿದ್ಯಾರ್ಥಿಗಳು ಕ್ಯಾಂಪಸ್ಸಿಗೆ ಬಂದು ತಮ್ಮ ಸಸಿಗಳನ್ನು ನೋಡಿಕೊಂಡು ಹೋಗುತ್ತಾರೆ ಎಂದು ಅಲ್ಲಿನ ಬೋಧಕರು ಹೇಳುತ್ತಾರೆ.

●

➢ ಪುಟ 8 ರಿಂದ..... ದಸರಾ...

ದಸರೆಯ ಮೊದಲ ದಿನದಿಂದ ಆರಂಭವಾಗಿ ದಶಮಿಯ ದಿವಸ ಮುಕ್ತಾಯಗೊಳ್ಳುವ ಉತ್ಸವ. ರಾಮಾಯಣ ನೃತ್ಯರೂಪಕ ರಾತ್ರಿಯಿಂದ ಬೆಳಗಿನವರೆಗೂ ನಡೆಯುತ್ತದೆ. ಪ್ರದರ್ಶನದ ಸ್ಥಳ ರಾಮಲೀಲಾ ಮೈದಾನ – ಹತ್ತು ತಲೆಯುಳ್ಳ ರಾವಣ, ಕುಂಭಕರ್ಣ, ಮೇಘನಾದ ರ 100 ಅಡಿ ಎತ್ತರದ (ಬಟ್ಟೆಯ ಪಟಾಕಿ ಬಾನ ಬಿರುಸು ತುಂಬಿದ) ಮೂರ್ತಿಯನ್ನು ನಿಲ್ಲಿಸಿ 10ನೇ ದಿನ ನೃತ್ಯರೂಪಕ ಮುಗಿಸಿ ರಾಮಾಯಣ ಪಾತ್ರಧಾರಿಗಳು ಮೆರವಣಿಗೆಯಲ್ಲಿ ಬರುತ್ತಾರೆ. ಪೂಜೆಯ ನಂತರ ರಾಮನಿಂದ ರಾವಣನ ವಧೆಯಾಗುತ್ತದೆ. ಇದು ಇಂದಿಗೂ ದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆಯುತ್ತದೆ.

ಇನ್ನೂ ಮಹಾಭಾರತದಲ್ಲಿ ವಿಜಯೋತ್ಸವದ ಅಂಗವಾಗಿ ಪಾಂಡವರು ಶಸ್ತ್ರಾಸ್ತ್ರವನ್ನು ಪಡೆಯಲು ಶಮೀವೃಕ್ಷದ ಬಳಿ ಬಂದು ಪೂಜೆ ಸಲ್ಲಿಸಿ ಯುದ್ಧ ಪ್ರಾರಂಭಿಸಿ ವಿಜಯಿಯಾಗುತ್ತಾರೆ. ದಸರಾ ಆಚರಣೆಯ ವಿಧಿ ವಿಧಾನಗಳನ್ನು ಗಮನಿಸಿದರೆ ಹಿಂದೂ ಮನೆ ಮನೆಗಳಲ್ಲಿ ಹತ್ತು ದಿನ ವಿಶೇಷ ಪೂಜೆ ನಡೆಯುತ್ತದೆ. ಸಪ್ತಮಿಯಂದು ಸರಸ್ವತಿ ಪೂಜೆ: ಪುಸ್ತಕಗಳು ಸಂಗೀತವಾದ್ಯಗಳಿಗೆ ಪೂಜೆ ಸಲ್ಲುತ್ತದೆ. ಮರುದಿನ ದುರ್ಗಾಷ್ಟಮಿ: ಮಹಾನ್ಅವಮಿಯ ದಿವಸ ಆಯುಧಪೂಜೆ: ಚಾಕು, ಕತ್ತರಿ, ಹೊಲಿಗೆ ಯಂತ್ರ, ಕಾರು, ಸ್ಕೂಟರುಗಳಿಗೂ ಕಾರ್ಖಾನೆಗಳಲ್ಲಿ ಯಂತ್ರೋಪಕಣಗಳಿಗೂ ಪೂಜೆ ಆಗುತ್ತದೆ.

ದೇಶದ ಹಲವು ಕಡೆ ಬೇರೆ ಬೇರೆ ರೂಪದಲ್ಲಿ ಈ ಉತ್ಸವ ನಡೆಯುವುದು ಎಲ್ಲರಿಗೂ ಗೊತ್ತು.

ಕರ್ನಾಟಕ, ತಮಿಳುನಾಡುಗಳಲ್ಲಿ ದಸರಾ ಹತ್ತು ದಿನವೂ ಬೊಂಬೆಗಳಿಗೆ ಅಲಂಕಾರ ಮಾಡಿ ರಾಜ ರಾಣಿಯನ್ನು ಪಟ್ಟದ ಗೊಂಬೆಯಾಗಿ ಲಕ್ಷ್ಮೀ ನಾರಾಯಣನ ಸ್ವರೂಪವೆಂದು ಭಾವಿಸಿ ಪೂಜೆ ಮಾಡುತ್ತಾರೆ. ನಿಜಕ್ಕೂ ಈ ಬೊಂಬೆಗಳನ್ನು ನೋಡುವುದೇ ಚಂದ.

ಬಂಗಾಲದಲ್ಲಿ ದಸರೆಯಲ್ಲಿ ನಡೆಯುವ ದುರ್ಗಾಪೂಜೆ ವಿಖ್ಯಾತ ವಾದದ್ದು. ರಾಜಾಸ್ಥಾನದಲ್ಲಿ ಮಹಾಲಕ್ಷ್ಮಿಯನ್ನು ಪೂಜಿಸುತ್ತಾರೆ. ಚೈತ್ರಯಾತ್ರೆಗೆ ಎಂದು ಮಹಾಲಕ್ಷ್ಮೀ ದೇವಸ್ಥಾನಕ್ಕೆ ಹೋಗಿ ಬರುತ್ತಾರೆ.

ಮಹಾರಾಷ್ಟ್ರದಲ್ಲಿಯೂ ಶಮೀ ಪೂಜೆ, ಶಮೀ ಪತ್ರ ಹಂಚುವಿಕೆ ನಡೆಯುತ್ತದೆ.

ವಿಜಯದಶಮಿಗೆ ಮತ್ತೊಂದು ಹೆಸರು ವಿದ್ಯಾದಶಮಿ. ಅಕ್ಷರಾಭ್ಯಾಸ, ಸಂಗೀತ, ನೃತ್ಯಭ್ಯಾಸ ಪ್ರಾರಂಭಿಸಲು ವಿಜಯದಶಮಿ ಶುಭದಿನ ಎಂಬ ನಂಬಿಕೆ ಇದೆ.

ಇದಲ್ಲದೆ ಮುಖ್ಯವಾಗಿ ಮೈಸೂರು ಅರಸರ ಮನೆದೇವತೆ ದೇವಿ ಚಾಮುಂಡೇಶ್ವರಿ. ಅಸುರೀಶಕ್ತಿಯ ಮಹಿಷಾಸುರನನ್ನು ವಧಿಸಿದ ದೇವಿಯನ್ನು ಆರಾಧಿಸುವ ಪರ್ವಕಾಲವೇ ದಸರಾ.

ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಲು ಮತ್ತು ನಕಾರಾತ್ಮಕ ಶಕ್ತಿಗಳನ್ನು ತೊಲಗಿಸಿ, ನಮ್ಮ ಸಂಸ್ಕೃತಿಯನ್ನು ಉಳಿಸಲು ನಡೆಸುವ ಹಿಂದೂ ಧರ್ಮ ಸ್ಥಾಪನೆಗಾಗಿ ಮಾಡುವ ಹಬ್ಬವೇ ದಸರಾ.

ಒಂದು ಕಾಲದಲ್ಲಿ ಆಳರಸರ ಮಹೋತ್ಸವವಾಗಿ ಮೆರೆದ ಈ ಉತ್ಸವ ಬದಲಾದ ಕಾಲಗಟ್ಟದಲ್ಲಿ ನಾಡಹಬ್ಬವಾಗಿ ಬದಲಾಗಿದೆ.

ಮಕ್ಕಳೇ ಈ ದಸರ ಮಹೋತ್ಸವ, ನಾಡಹಬ್ಬದ ಈ ಸಂದರ್ಭದಲ್ಲಿ ಇಡೀ ಮೈಸೂರು ನಗರ ಸುಣ್ಣ ಬಣ್ಣಗಳಿಂದ ಅಲಂಕೃತವಾಗುತ್ತದೆ. ಮೈಸೂರು ಅರಮೆ ದೀಪಾಲಂಕಾರಗಳಿಂದ ಜಗಮಗಿತವಾಗುತ್ತದೆ. ವಸ್ತು ಪ್ರದರ್ಶನ ದಸರೆಯ ಮುಖ್ಯ ವಿಶೇಷ ಆಕರ್ಷಣೆ. ಪ್ರತಿ ಸಂಜೆ ವಸ್ತು ಪ್ರದರ್ಶನದಲ್ಲಿ ವಿಶೇಷ ಪ್ರತಿಭಾವಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆ. ವಸ್ತು ಪ್ರದರ್ಶನದಲ್ಲಿ ವಿವಿಧ ಮಾರಾಟ ಮಳಿಗೆಳು ಇದ್ದು, ಮಕ್ಕಳಿಗೆ ವಿಶೇಷ ಆಸಕ್ತಿಯುಂಟು ಮಾಡುತ್ತವೆ. ಶಾಲಾ ಕಾಲೇಜುಗಳಲ್ಲಿ ಕ್ರೀಡಾ ಸ್ಪರ್ಧೆ, ಸಾಂಸ್ಕೃತಿಕ ಸ್ಪರ್ಧೆ, ಕುಸ್ತಿ ಸ್ಪರ್ಧೆಗಳಿದ್ದು, ಬಹುಮಾನ ವಿಜೇತರನ್ನು ಸನ್ಮಾನಿಸಲಾಗುತ್ತದೆ.

ಕರ್ನಾಟಕ ವೈಭವವನ್ನು ಬಿಂಬಿಸುವ ನೃತ್ಯ, ಡೋಲುಕುಣಿತ, ಸೈನಿಕರು, ಆನೆ, ಕಾಲಾಳುಗಳು, ಟ್ಯಾಬ್ಲೋಸ್, ವಿದ್ಯಾರ್ಥಿಗಳ ಕವಾಯಿತು, ಕಂಸಾಲೆ, ನಂದೀಕುಣಿತ, ಜಂಬೂಸವಾರಿಯ ಮೆರವಣಿಗೆಯಲ್ಲಿ ಇದ್ದು ಜನಮಾನಸದಲ್ಲಿ ಅಚ್ಚಳಿಯದೆ ಶಾಶ್ವತವಾಗಿ ನೆನಪಿನಲ್ಲುರುವ ಅಂಬಾರಿಯ ಮೇಲಿರುವ ಚಾಮುಂಡೇಶ್ವರಿ ಎಲ್ಲವೂ ಚಿರಸ್ಮರಣೀಯ ಎಂದು ಶಿಕ್ಷಕರು ದಸರಾ ವಿವರಣೆ ನೀಡಿ ರಜೆಯಲ್ಲಿ ದಸರೆ ನೋಡಲು ಮೈಸೂರಿಗೆ ತೆರಳಿ ಎಂದು ಹೇಳಿ ಮುಗಿಸಿದಾಗ ಶಾಲೆಯ ಕಡೆಯ ಗಂಟೆ ಬಾರಿಸಿತು. ●

➢ ಪುಟ 7 ರಿಂದ..... ಸ್ವಾಮಿ ವಿವೇಕಾನಂದ...

ಪ್ರತಿನಿಧಿಯಾಗಿ ಅತ್ಯದ್ಭುತವಾದ ಮಾತಿನ ಶೈಲಿಯಿಂದ ಇಡೀ ವಿಶ್ವವನ್ನೆ ಬೆರಗುಗೊಳಿಸಿದ ಸ್ಮರಣೀಯವಾದ ದಿನ. ಹೌದು ಸೆಪ್ಟೆಂಬರ್ 11, 1893ರಂದು ಚಿಕಾಗೋದ ಭಾಷಣದ ಮೂಲಕ ವಿವೇಕರ ವಾಕ್ಚಾತುರ್ಯ ಪ್ರಾಮುಖ್ಯತೆ ಇಡೀ ಜಗತ್ತಿಗೆ ಗೊತ್ತಾಯಿತು. ಚಿಕಾಗೋದ ಭಾಷಣ ಕೇವಲ ವಿವೇಕರ ನುಡಿಯಾಗದೆ ಇಡೀ ಭಾರತೀಯರ ಮನದ ಧ್ವನಿಯಾಗಿತ್ತು. ಭಾರತವೆಂದರೆ ವಿವೇಕಾನಂದ, ವಿವೇಕರೆಂದರೆ ಭಾರತ ಎಂದು. ಭಾರತದ ಬಗ್ಗೆ ಗೌರವ ಭಕ್ತಿ ಮೂಡಿ ಪ್ರಭಾವಕ್ಕೆ ಸಿಲುಕುವಷ್ಟು ಭಾರತ ಅಂದು ಅಲ್ಲಿ ವಿಜೃಂಭಿಸಿತ್ತು.

ನಮ್ಮ ಸಂಸ್ಕೃತಿ, ಸಂಪ್ರದಾಯ, ಧರ್ಮ ಸಹಿಷ್ಣುತೆಗಳನ್ನು ವೇದ–ಉಪನಿಷತ್ತು, ರಾಮಾಯಣ, ಮಹಾಭಾರತ ಭಗವದ್ಗೀತೆ ಮುಂತಾದ ದಾರ್ಶನಿಕ ಗ್ರಂಥಗಳ ಸಾರವನ್ನು ಅರಿಯುವ ಅಧ್ಯಾತ್ಮದ ಶಕ್ತಿಯಲ್ಲಿ ಇಡೀ ವಿಶ್ವ ಬೆರೆಯುವ ದಾರಿಯಾಯಿತು ಈ ಭಾಷಣ. ಬಡರಾಷ್ಟ್ರವಲ್ಲ, ದೈವತ್ವ ತುಂಬಿದ ಹಿಂದೂ ಸಿರಿವಂತ ರಾಷ್ಟ್ರ ಭಾರತ ಎಂಬ ಕಲ್ಪನೆ ಮೂಡಿತು. ಹಿಂದೂ ಯೋಗಿಯನ್ನು ನೋಡಿ ಯಾರು ಅಪಹಾಸ್ಯ ಮಾಡಿದ್ದರೋ ಕಲ್ಲಿನಪೆಟ್ಟು ಕೊಟ್ಟಿದ್ದರೋ ಅವರೇ ಕಾಲಿಗೆರಗಿ ತಲೆಬಾಗಿಸುವಂತೆ ಮಾಡಿದ್ದು ಈ ಭಾಷಣ. ಹೀಗೆ ಹತ್ತು ಹಲವು ಮಹತ್ವ ಈ ಚಿಕಾಗೋದ ಭಾಷಣಕ್ಕೆ ಇದೆ. ನಿಜಕ್ಕೂ ಭಾರತ ಮಾತೆ ಧನ್ಯೆ ವಿವೇಕರಂತ ಅಮೂಲ್ಯ ರತ್ನಕ್ಕೆ ಜನ್ಮನೀಡಿದ್ದಳು. ಈ ವೀರಸನ್ಯಾಸಿ ಪುತ್ರನ ಮೂಲಕ ವಿಶ್ವದಲ್ಲಿ ತನ್ನ ಮುಕುಟಕ್ಕೆ ಹೆಮ್ಮೆಯ ಗರಿ ಸಿಕ್ಕಿಸಿಕೊಂಡಳು. ಧನ್ಯ ಭಾರತ, ಧನ್ಯ ವಿವೇಕ.

ಕೃಪೆ : ವಿಕ್ರಮ

# ಸರ್ಕಾರ ಪಠ್ಯಗಳ ಬದಲಾವಣೆ ಮಾಡಲಿ: ರಘುನಂದನ





ಹುಬ್ಬಳ್ಳಿ: ಹಿಂದೆ ಋಷಿ ಮುನಿಗಳು ಹೋಮ ಹವನಗಳಿಗೆ ತುಪ್ಪ, ಮೊಸರು ಬಳಸಿದಕ್ಕೆ ಆಹಾರದ ಬಿಕ್ಕಟ್ಟು ನಿರ್ಮಾಣವಾಗಿತ್ತು ಎಂದು ಇಂದಿನ 6ನೇ ತರಗತಿ ಪಠ್ಯದಲ್ಲಿ ಉಲ್ಲೇಖಿಸಲಾಗಿದೆ. ಶತಮಾನಗಳ ಹಿಂದೆ ಇಂಥ ಬಿಕ್ಕಟ್ಟು ಎಲ್ಲಿತ್ತು ತಜ್ಞರು ಹೇಳಲಿ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಚಾರಕ ರಘುನಂದ ಪ್ರಶ್ನಿಸಿದರು.

ಅವರು ನಗರದ ಬಿವಿಬಿ ಟೆಕ್ನಾಲಾಜಿ ಆವರಣದ ಬಯೋಟೆಕ್ನಾಲಜಿ ಸಭಾಭವನದಲ್ಲಿ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಶನಿವಾರ ನಡೆದ ಗುರುವಂದನಾ–2019 ಮತ್ತು 'ಅಧ್ಯಾಪಕ ಭೂಷಣ' ಪ್ರಶಸ್ತಿ ಪ್ರದಾನ ಸಮಾರಂಭ ಉದ್ದೇಶಿಸಿ ಮಾತನಾಡಿದರು.

ಅದೇ ಪಠ್ಯದಲ್ಲಿ ಇಸ್ಲಾಂ ಧರ್ಮ, ಶಾಂತಿ ಧರ್ಮ ಎಂದು ಉಲ್ಲೇಖಿಸಲಾಗಿದೆ. ಇದು ಬರಗೂರು ಅವರ ಕೊಡುಗೆಯಾಗಿದೆ. ಸರ್ಕಾರ ಈ ಕುರಿತು ಗಂಭೀರವಾಗಿ ಪರಿಗಣಿಸಿ ಪಠ್ಯಗಳ ಬದಲಾವಣೆ ಮಾಡಲಿ. ವಾಸ್ತವ ಮತ್ತು ಪರಂಪರೆಯನ್ನು ಬಿಟ್ಟು ಐಡಿಯಾಲಜಿ ಹೇರುವುದರಿಂದ ಇಂಥ ಬಿಕ್ಕಟ್ಟು ನಿರ್ಮಾಣವಾಗುತ್ತಿವೆ. ದೇಶದ ಇಂದಿನ ಸ್ಥಿತಿಗೆ ಪ್ರತಿಯೊಬ್ಬ ಭಾರತೀಯ ಕಾರಣ ಎಂದರು.

ಇನ್ನು ಗುರುವಿನಷ್ಟೇ ವಿದ್ಯಾರ್ಥಿಯು ಪ್ರಮುಖ ಪಾತ್ರ ವಹಿಸುತ್ತಾನೆ. ನದಿ, ಪ್ರಕೃತಿಯನ್ನು ದೇವರೆಂದು ಪೂಜಿಸುತ್ತೇವೆ. ಆದರೆ, ಇಂದು ಅವುಗಳ ಸ್ಥಿತಿ ಚಿಂತಾಜನಕವಾಗಿದೆ. ಅವುಗಳನ್ನು ಅಕ್ಷರದಲ್ಲಿ ತಿದ್ದಲು ಸಾಧ್ಯವಿಲ್ಲ. ನಡುವಳಿಕೆಯಿಂದ ಮಾತ್ರ ತಿದ್ದಲು ಸಾಧ್ಯ. ಹೀಗಾಗಿ ಗುರುಗಳ ನಿಲುವು ವಿದ್ಯಾರ್ಥಿಗಳ ಮೇಲೆ ಬೆಳಕು ಚೆಲ್ಲಬೇಕು. ಜ್ಞಾನದಲ್ಲಿ ಶ್ರೀಮಂತನಾದರೂ, ಹೃದಯ ಔದಾರ್ಯ ಮೆರೆದಾಗ ಮಾತ್ರ ಗುರುವಿನ ಸ್ಥಾನ ತುಂಬಲು ಸಾಧ್ಯ ಎಂದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ಅನಂತನ ಮಾತನಾಡಿ, ಭಾರತದಲ್ಲಿ ಪ್ರತಿ ವರ್ಷ ನೂರಾರು ಸಂಶೋಧನೆಗೆ ಪಿಎಚ್‌ಡಿ ಪದವಿ ನೀಡಲಾಗುತ್ತದೆ. ಆದರೆ, ಸ್ವಾಂತಂತ್ರ್ಯ ಪೂರ್ವ ಮತ್ತು ನಂತರದಿಂದ ಇಲ್ಲಿಯವರೆಗೆ ಭಾರತದ ಮೂಲ ಸಮಸ್ಯೆಗಳಾದ ಬಡತನ, ನಿರುದ್ಯೋಗ, ಕಳಪೆ ಗುಣಮಟ್ಟ ಶಿಕ್ಷಣಕ್ಕೆ ಪರಿಹಾರ ದೊರೆತಿಲ್ಲ. ಹೀಗಾಗಿ ನಮ್ಮ ಶಿಕ್ಷಣ ವ್ಯವಸ್ಥೆಯ ಮೂಲದಲ್ಲಿರುವ ಸಮಸ್ಯೆಯ ನಿವಾರಣೆಗೆ ಚಿಂತಿಸುವ ಅಗತ್ಯವಿದೆ ಎಂದರು. ಪ್ರಸ್ತುತ ದಿನಗಳಲ್ಲಿ ನೂರಾರು ಸಂಶೋಧನೆಗಳನ್ನು ಕೈಗೊಂಡು ಪಿಎಚ್‌ಡಿ ಪಡೆಯುತ್ತಾರೆ. ಆದರೆ, ಬಹುಮುಖ್ಯವಾಗಿ ನಿವಾರಣೆಯಾಗಬೇಕಾದ ಭಾರತದ ಬೇರು ಮಟ್ಟದಲ್ಲಿನ ಸಮಸ್ಯೆಗಳಿಗೆ ಇಂದಿಗೂ ಪರಿಹಾರ ದೊರೆತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಇಂದು ಪ್ರಾಥಮಿಕ ಶಿಕ್ಷಕ, ಮಾಧ್ಯಮಿಕ ಶಿಕ್ಷಕ, ಕಾಲೇಜು ಶಿಕ್ಷಕ, ಅನುದಾನಿತ, ಅನುದಾನೇತರ, ಅತಿಥಿ ಶಿಕ್ಷಕ ಎಂದು ಶಿಕ್ಷಕ ವರ್ಗವನ್ನು ಬೇರ್ಪಡಿಸುವ ಕಾರ್ಯ ನಡೆದಿದೆ. ಶಿಕ್ಷಕರು ಯಾವತ್ತೂ ಶಿಕ್ಷಕರೇ ಅವರನ್ನು ಬೇರ್ಪಡಿಸದೇ ಒಗ್ಗೂಡಿಸುವ ಕಾರ್ಯವಾಗಲಿ. ಅದರಂತೆ ಕಾನೂನುಗಳು ಶಿಕ್ಷಣಕ್ಕೆ ಪೂರಕವಾಗಿರಬೇಕೇ ಹೊರತು ತೊಡಕಾಗಬಾರದು. ಈ ನಿಟ್ಟಿನಲ್ಲಿ ಶಿಕ್ಷಣ ನೀತಿಯಲ್ಲಿ ಬದಲಾವಣೆ ಅವಶ್ಯವಿದು , ಇದೇ ವೇದಿಕೆ ಮೇಲಿದ್ದ ಶಿಕ್ಷಣ ಕ್ಷೇತ್ರದಿಂದ ಆಯ್ಕೆಯಾಗಿರುವ ವಿಧಾನ ಪರಿಷತ್ ಸದಸ್ಯ ಅರುಣ ಶಹಾಪುರ ಅವರು ಈ ಕುರಿತು ಸರ್ಕಾರದ ಗಮನಕ್ಕೆ ತರಲಿ ಎಂದರು.

ಜೀವಮಾನದ ಶ್ರೇಷ್ಠ ಸಾಧಕ ಪ್ರಶಸ್ತಿಗೆ ಭಾಜನರಾದ ಡಾ. ಕೆ.ಎಸ್. ಶರ್ಮಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ನನ್ನ ಸಾಧನೆಗೂ ಮೀರಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಬೋಧನೆ ನನ್ನ ಮೊದಲ ಆಯ್ಕೆಯಾಗಿದ್ದು, ಶಿಕ್ಷಣದ ಸಿದ್ಧಾಂತಗಳ ಮೇಲೆ ನಾನು ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದೇನೆ ಎಂದರು.

ಶಿಕ್ಷಕ ನಿರಂತರ ಶಿಕ್ಷಕನಾಗಿರಬೇಕು. ಶಿಕ್ಷಕ ನಿರಂತರ ವಿದ್ಯಾರ್ಥಿಯೂ ಆಗಿರಬೇಕು. ಶಿಕ್ಷಕ ಪುಸ್ತಕದ ಬದನೆಕಾಯಿ ಆಗಬಾರದು ಎಂದ ಅವರು, ಅನ್ಯಾಯದ ವಿರುದ್ಧ ಹೋರಾಡುವ, ಮಾನವೀಯ ಮೌಲ್ಯಗಳ ಸಮಾಜ ನಿರ್ಮಾಣ ಮಾಡುವವನೆ ನಿಜವಾದ ಶಿಕ್ಷಕ ಎಂದರು.

ಕಾರ್ಯಕ್ರಮದಲ್ಲಿ ಗೌರವಾನ್ವಿತ ಅತಿಥಿಗಳಾಗಿ ಕನಕದಾಸ ಶಿಕ್ಷಣ ಸಮಿತಿ ಕಾರ್ಯದರ್ಶಿ ರವಿ ದಂಡಿನ ಹಾಗೂ ಕೆಎಲ್‌ಇ ನಿರ್ದೇಶಕ ಶಂಕರಣ್ಣ ಮುನವಳ್ಳಿ ಪಾಲ್ಗೊಂಡಿದ್ದರು. ಡಾ.ರಘು ಅಕಮಂಚಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಸಂದೀಪ ಬೂದಿಹಾಳ, ಶ್ರೀಶೈಲ ಗಣಿ, ಡಾ. ಬಸವರಾಜು ತಲ್ಲೂರ. ಡಾ. ಎಚ್.ವಿ ಬೆಳಗಲಿ, ಡಾ. ಪ್ರಸನ್ನ ಫಂಡರಿ, ಸಂಗೀತ ಕಟ್ಟಿಮನಿ, ಡಾ. ವಾಯ್ ಎಮ್ ಭಜಂತ್ರಿ, ಡಾ. ವಿಜಯಕುಮಾರಿ ಚಿಲಕವಾಡಿ, ಶ್ರೀಧರ ಪಾಟೀಲ ಕುಲಕರ್ಣಿ, ಬಸವರಾಜ ದೇವರಮನಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

MAG(3)/NPP/26/2018-19 Registered No. RNI 45459/85
Posted at Bangalore PSO Bangalore -560 026
Date of Publishing : 17-09-2019
Date of Posting 20h or 21st of every month
Posted at Periodical Rate

# ಚಿತ್ರ ಸುದ್ದಿ










ದಿನಾಂಕ 23–9–2019 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕೇಂದ್ರ ಕಚೇರಿ ಯಾದವ ಸ್ಮೃತಿ ಬೆಂಗಳೂರಿನಲ್ಲಿ
ಸಂಘದ ಎಲ್ಲಾ ಜಿಲ್ಲೆಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳೊಂದಿಗೆ
ಮಾನ್ಯ ಶ್ರೀ ಸುರೇಶ್ ಕುಮಾರ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com